ಅಧ್ಯಕ್ಷರು: ಅವಕಾಶ ಕೊಡುತ್ತೇನೆ. ಆದರೆ ಇದೆಲ್ಲಾ ಒಂದೊಂದು ಗಂಟೆಯೊಳಗೆ ಮುಗಿಯಬೇಕು. ಸರ್ಕಾರದ ಪರವಾಗಿ ಬಹಳ ಪೀಬಲ್ ವಾಯ್ಸ್, ನಾನೇನು ಮಾಡಲಿ?

7. ನಿಯಮ 69ರ ಅಡಿಯಲ್ಲಿ ಚರ್ಚೆ

ವಿಷಯ: KIADB ಯಲ್ಲಿ ಜರುಗಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನಿಯಮ 69ರ ಕೆಳಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ಈ ರಾಜ್ಯದ KIADB ಏನಿದೆ, ತಕ್ಷಣ ಮುಚ್ಚದೇ ಹೋದರೆ, ಬೆಂಗಳೂರು ನಗರಕ್ಕೆ ಮಾರಕವಾಗುತ್ತದೆ ಎಂದು ಹೇಳಿ, ನಾನು ಆವತ್ತು adjournment move ಮಾಡಿದಾಗ KIADB ಯಲ್ಲಿ ಶ್ರೀಧರ್ ಎನ್ನುವ ಒಬ್ಬ ಕಾರ್ಯದರ್ಶಿಗೆ ಅವರು suspend ಮಾಡಿದ್ದರು, ಅದರ ಬಗ್ಗೆ KIADBಯಲ್ಲಿ ಆಗಿರುವ ಪೂರ್ಣ ಹಗರಣಗಳ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದೆ. ಶ್ರೀಧರ್ ಎನ್ನುವವರು 165 ಎಕರೆ ಜಮೀನ್ನನು ಲೀಸ್-ಕಮ್-ಸೇಲ್ ಮಾಡಬೇಕಾದ ಜಮೀನನ್ನು ನೈಸ್ ಕಂಪನಿಗೆ out right sale ಮಾಡಿದ್ದಾರೆಂದು ಸರ್ಕಾರದವರು ಇವತ್ತು ಅವರನ್ನು suspend ಮಾಡಿದ್ದಾರೆ. ನಾನು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಿಜ. ಶ್ರೀಧರ್‌ರವರು ಇವತ್ತು ಲೀಸ್-ಕಮ್-ಸೇಲನ್ನು ಸೇಲ್ ಎಂದು ಮಾಡಿ ಕೊಟ್ಟಿದ್ದಾರೆ. ನಾನು KIADB act ನ್ನು ಪೂರ್ಣವಾಗಿ ಓದಿದೆ. ಈ KIADB act ನಲ್ಲಿ ಅವರು ಪ್ರಾವಿಷನ್ ಮಾಡಿಕೊಂಡಿದ್ದಾರೆ. 1987, 1997, 1999, 2000 ದಲ್ಲಿ ಬಹಳ ಧಾರುಣವಾದ amendment ಗಳನ್ನು KIADB ಯಲ್ಲಿ ಮಾಡಿಕೊಂಡು ಸೇಲ್‌ಗೆ ಪ್ರಾವಿಷನ್ ಮಾಡಿಕೊಂಡಿದ್ದಾರೆ. ಆದರೆ Frame work agreement ನಲ್ಲಿ ಅವರು 30ವರ್ಷವಾದ ನಂತರ, ಇಡೀ ಅಸೆಟ್‌ನ್ನು ರಾಜ್ಯ ಸರ್ಕಾರಕ್ಕೆ ವಾಪಸ್ಸು ಕೊಡಬೇಕೆಂದು ಇದ್ದುದು, out right ಅವರಿಗೆ ಸೇಲ್ ಮಾಡಿದ್ದನ್ನು ಅವರು ಹೇಗೆ ವಾಪಸ್ ತೆಗೆದುಕೊಳ್ಳುತ್ತಾರೆ ನಮಗೆ ಗೊತ್ತಿಲ್ಲ. ಶ್ರೀಧರ್‌ರವರನ್ನು suspend ಮಾಡಿದ್ದು ತಪ್ಪು ಎಂದು ನಾನು ಇಲ್ಲಿ ವಾದ ಮಾಡುವುದಿಲ್ಲ. Government ಒಂದು action ತೆಗೆದುಕೊಂಡಿದೆ, ಅದು ಅವರಿಗೆ ಬಿಟ್ಟಿದ್ದು. 2003ನೇ ಇಸವಿಯಿಂದ ಈ ಸೇಲ್ ಡೀಡ್‌ಗಳನ್ನು

ಇವರು ಮಾಡಿಕೊಂಡು ಬಂದಿದ್ದಾರೆ. ನನ್ನ ಹತ್ತಿರ ಮಾಹಿತಿ ಇದೆ. 28.6.03 ರಲ್ಲಿ 30.00 ಎಕರೆಯನ್ನು 3.7 ಕೋಟಿ ರೂಪಾಯಿಗಳಿಗೆ ಮಾರಿದ್ದಾರೆ. 7.2.04 ರಲ್ಲಿ 5 ಎಕರೆ, 27.04.04 ರಲ್ಲಿ 2 ಎಕರೆ, 37 ಎಕರೆ, 17 ಗುಂಟೆ ಆವತ್ತು ಮಾಡಿದ್ದಾರೆ, ಅದಾದ ನಂತರ 20.10.2003, 14.1.2004, 7.2.2004, 8.3.2004 ರಿಂದ ಹಿಡಿದು, 4.7.2007 ರವರೆಗೆ ಜಮೀನಿನ ಸೇಲ್ ಡೀಡನ್ನು ಮಾಡಿಕೊಂಡು ಬಂದಿದ್ದಾರೆ. ಇಲ್ಲಿ ಮೂಲಭೂತ ಪ್ರಶ್ನೆ ಮೂರನೇ ವರ್ಷದಿಂದಲೇ ಸೇಲ್ ಡೀಡ್ ಪ್ರಾರಂಭವಾಗಿದೆ. ಅದಕ್ಕೆ ಮೊದಲು ಸೋಮಶೇಖರ ರೆಡ್ಡಿಯವರ ಕೇಸಿನಲ್ಲಿ court decision ಸ್ಪಷ್ಟವಾಗಿತ್ತು. Frame-work agreement ಪ್ರಕಾರ 19,000 ಚಿಲ್ಲರೆ ಜಮೀನು ಏನಿದೆ, ಅದು ಕೊಡಿ ಎಂದು ಇದೆ. ಅವರು ಕೂಡ ಇವತ್ತು ಹೇಳುತ್ತಿದ್ದಾರೆ, ನನಗೆ ಅಷ್ಟು ಜಾಗ ಸಾಕು, ನನಗೇಕೆ ತೊಂದರೆ ಕೊಡುತ್ತಿದ್ದೀರಿ, ಕೋರ್ಟ್‌ಗಳ ಆದೇಶವಾದರೂ ಕಿರುಕುಳ ಕೊಡುತ್ತಿದ್ದೀರಿ, ನನಗೆ ಜಮೀನಿಗೆ ಆಗುವಷ್ಟು ಜಾಗವನ್ನು ಬಿಟ್ಟುಕೊಡಿ ಎಂದು ಹೇಳುತ್ತಿದ್ದಾರೆ. ನಾನು ಇವತ್ತು ಈ ಸರ್ಕಾರವನ್ನು ಡಿಮ್ಯಾಂಡ್ ಮಾಡುವುದು, ಮಾನ್ಯ ಪ್ರಕಾಶ್‌ರವರು ಇದ್ದಾರೆ, ಇವತ್ತಿನವರೆಗೆ ತಾವು ಅಲೈನ್‌ಮೆಂಟ್ ಫಿಕ್ಸ್ ಮಾಡಿಲ್ಲ. ಇವತ್ತಿನವರೆಗೆ ಬೆಂಗಳೂರಿನ ಯಾವ ಜಾಗ ಅವರಿಗೆ ಕೊಡಬೇಕೆಂದು ಹೇಳಲಿಲ್ಲ. ಇವತ್ತಿನವರೆಗೆ ಯಾವ ಜಾಗಕ್ಕೆ ಅವರು ಅರ್ಹರಿದ್ದಾರೆಂದು ಕೂಡ ತಾವು ಹೇಳಲಿಲ್ಲ. ತಾವು ಪಾರ್ಟಿ ಆದಿರಿ, ಕೋರ್ಟ್ ಮುಂದೆ ಬಂದಿರಿ, ತಾವೂ ಈ ಕೇಸಿನಲ್ಲಿ ಬೇಕಾದಷ್ಟು ಅಫಿಡವಿಟ್ ಹಾಕಿದಿರಿ, ಎಲ್ಲಾ ಮಾಡಿದಿರಿ ತಾವು. ಹೀಗಾಗಿ ಇವತ್ತು ಕೂಡ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಜನ ಆತಂಕದಲ್ಲಿ ಬದುಕಿದ್ದಾರೆ. ಅದರ ಜೊತೆಗೆ ಇವತ್ತು ಇವರೇನು ಜಮೀನು ಮಾರಿದ್ದಾರೆಂದು action ತೆಗೆದುಕೊಳ್ಳುತ್ತಾರೆ. "The proceedings of the meeting held in the chambers of the Additional Chief Secretary & Principal Secretary of Government, PWD regarding issue related to Bangalore-Mysore Infrastructure Corridor Project on 13.10.2006". ಇವತ್ತಿನ ಸನ್ಮಾನ್ಯ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷತೆ ವಹಿಸಿರುವ ಸಭೆಯಲ್ಲಿ ಆಗಿರುವ ತೀರ್ಮಾನದ ಕೊನೆಯ ಪ್ಯಾರದಲ್ಲಿ, "After reconciling consent and non-consent lands, sales

deeds have to be executed on the consent lands. The ACS & Principal Secretery PWD instructed to expedite and complete the process at the earliest" ಸನ್ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕುಳಿತು ಆ ಸಭೆಯಲ್ಲಿ ರೆವಿನ್ಯೂ ಸೆಕ್ರೆಟರಿ, Forest conservator, Additional Secretary to Government Commerce & Industries, Deputy Conservator of Forest, ಎಲ್ಲರೂ ಇದ್ದ ಸಭೆಯಲ್ಲಿ ಅದನ್ನು ಸೇಲ್ ಡೀಡ್ ಮಾಡಿಕೊಡಿ ಎಂದು ನಿರ್ಧಾರ ತೆಗೆದುಕೊಳ್ಳುತ್ತೀರಿ. ಈ ಸೇಲ್ ಡೀಡ್ ಮಾಡಿದರು ಎಂದು ಇವತ್ತು ಶ್ರೀಧರ್‌ರವರನ್ನು suspend ಮಾಡಿದ್ದೀರಿ. Are you going to take same action against those erring officers who are parties for this decision? ಸೇಲ್ ಡೀಡ್ ಮಾಡಿ ಕೊಡಿ ಎಂದು ಹೇಳಿರುವವರಿಗೂ ನೀವು ಅದೇ action ತೆಗೆದುಕೊಳ್ಳುತ್ತೀರಾ ಎಂದು ನಾನು ಈ ಸಭೆಯ ಮುಂದೆ ಒತ್ತಾಯ ಮಾಡುತ್ತೇನೆ. 165 ಎಕರೆ ಒಂದು ಸಂಸ್ಥೆಯಲ್ಲಿ ಒಬ್ಬ ಸೆಕ್ರೆಟರಿ ಸೇಲ್ ಡೀಡ್ ಮಾಡಿಕೊಡುವುದಕ್ಕಾಗುವುದಿಲ್ಲ. ಅವನು ಒಂದೇ ದಿನ ಮಾಡಿಲ್ಲ. 2003ನೇ ಇಸವಿಯಿಂದ 2007ರವರೆಗೆ ಮಾಡಿರುವುದಕ್ಕೆ ಈಗ suspend ಮಾಡಿದ್ದೀರಿ. Whole KIADB ಇವತ್ತು ಆತಂಕದಲ್ಲಿದೆ. ನಮ್ಮ ಕೈಯಲ್ಲಿ ಏನೇನು ಮಾಡಿಸುತ್ತಾರೋ, ಆಮೇಲೆ ಯಾರನ್ನು suspend ಮಾಡುತ್ತಾರೋ, ಯಾರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೋ ಎನ್ನುವುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಕನಿಷ್ಠ ಪಕ್ಷ ಈ ಸದನಕ್ಕಾದರೂ ಅರ್ಥವಾಗಬೇಕು. Chief Secretary ಅವರೇ ಕುಳಿತು, When he was Principal Secretary to PWD ನೀನು ಸೇಲ್ ಡೀಡ್ ಮಾಡು ಎಂದು ಹೇಳುವುದು, ನೀನು ಸೇಲ್ ಡೀಡ್ ಮಾಡಿದ್ದೀರಿ ಎಂದು ಇವತ್ತು ಅವನಿಗೆ ಸಸ್ಪೆಂಡ್ ಮಾಡುವುದು. It is very much against the framework agreement . Supreme Courtಗೆ ನೀವೇ ಅರ್ಜಿ ಹಾಕುತ್ತೀರಿ, PWD & KIADB officers file ಗಳನ್ನು ಕಟ್ಟಿ ಇಟ್ಟಿದ್ದಾರೆಂದು ಅರ್ಜಿ ಹಾಕುತ್ತೀರಿ, 2,200 ಎಕರೆಯನ್ನು ಹಿಂದಕ್ಕೆ ಕೊಡಿ ಎಂದು ಎಂದು ಹೇಳುತ್ತೀರಿ, ಆ ನಂತರ ಏನು ಮಾಡಿದ್ದೀರಿ? ನಾವು ಆವತ್ತು ನಿಮಗೆ ಹೇಳಿದೆ, ನನ್ನ ಹತ್ತಿರ ಒಂದು ಪೇಪರ್ ಇದೆ. I have a record. KIADB ಯವರು KIADB ವಶಕ್ಕೆ ತೆಗೆದುಕೊಂಡ ಮೇಲೆ, after 28(4) ಅಥವಾ

KIADB ಯವರು ವಶಕ್ಕೆ ತೆಗೆದುಕೊಂಡ ಜಮೀನನ್ನು ಗೈಡೆನ್ಸ್ ವ್ಯಾಲ್ಯೂನಂತೆ ಒರಿಜಿನಲ್ ಓನರ್‌ನಿಂದ ಬೇರೆಯವರಿಗೆ ಕ್ರಯ ಮಾಡಲಿಕ್ಕೆ NOC ಕೊಡುತ್ತಿದ್ದೀರಿ. ನಾನು ಹೇಳುತ್ತೇನೆ, sale deeds executed –ಸೇಲ್ ಡೀಡ್ ಎಷ್ಟಾಗುತ್ತದೆ? B.M. ಕಾವಲ್‌ನಲ್ಲಿ ಶಾಂತಿ ಬಿ., ಶಾಂತಿ ಬಿ., ಶಾಂತಿ ಬಿ, ಎಂದು ಹೇಳಿ ರೇವಣ್ಣನವರಿಗೆ ಸೇಲ್ ಡೀಡ್ execute ಮಾಡಿದ್ದಾರೆ. ಕೆ.ಎಸ್.ಪುಷ್ಪಲತ, ಕೆ.ಎಸ್.ಪುಷ್ಪಲತ, ರುದ್ರೇಶ್, ರಾಜಶೇಖರಯ್ಯ, ರುದ್ರಗೌಡ, ಶಿವಕುಮಾರ್ ಬಿ.ಸಿ., ರುದ್ರಗೌಡ ಎಂದು ಹೇಳಿ, 29 ಎಕರೆಯನ್ನು execute ಮಾಡಿಕೊಟ್ಟರು. KIADB ಯಲ್ಲಿ NOC ಕೊಡುವ ಹೊಸ ದಂಧೆ ಪ್ರಾರಂಭವಾಗಿದೆ. ಒರಿಜನಲ್ ಓನರ್ of the propertyಗೆ after the acquisition proceedings are final, NOC ಕೊಟ್ಟು, ನೀವು ಮಾರಿ ಎಂದು ಹೇಳುತ್ತಾರೆ. NOC ಯಲ್ಲಿ ತಾವು ಏನು ಕೊಡುತ್ತೀರಿ? ನೀವು ಗೈಡೆನ್ಸ್ ವ್ಯಾಲ್ಯೂ ಎಂದು ಅವರಿಗೆ ಮಾರಬಹುದು ಎಂದು. ಇವರೆಲ್ಲಾ ಯಾರಿಗೆ ಮಾರಿದ್ದಾರೆ? ಇವರೆಲ್ಲಾ ಮಾರಿರುವುದು either ನಿಮ್ಮ ನೈಸ್ ಕಂಪನಿಯವರ ಸಂಬಂಧಿಗಳಿಗೆ ಅಥವಾ ಅಲ್ಲಿರುವ employees ಗೆ ಕೊಟ್ಟಿದ್ದಾರೆ. ನೀವು ಅವರಿಗೆ ಜಮೀನು ಕೊಡುವುದು ಕಡಿಮೆ ಮಾಡಬೇಕೆಂದು ಹೇಳಿ ಸುಪ್ರೀಂ ಕೋರ್ಟ್ ಒಪ್ಪಿಕೊಂಡು, ಸೋಮಶೇಖರ ರೆಡ್ಡಿ ಕೇಸ್ ಪ್ರಕಾರ framework agreement ನಲ್ಲಿರುವಷ್ಟು ಜಮೀನು ಕೊಡಿ 9,000, 10,000 ಎಕರೆ ಜಮೀನು ಕರ್ನಾಟಕದಲ್ಲಿ ಅಥವಾ ಬೆಂಗಳೂರಿನಲ್ಲಿ ಉಳಿಯುತ್ತದೆ, ಎಂದರೆ, ತಾವು ಈಗಾಗಲೇ ಅವರಿಗೆ ಶುದ್ಧ ಕ್ರಯಕ್ಕೆ ಕೊಡಿಸುತ್ತಿದ್ದೀರಿ. ಶುದ್ಧ ಕ್ರಯಕ್ಕೆ NOC ಮಾಡಿ you are transferring the entire property. ಎರಡನೆಯದು ಏನಾಗುತ್ತದೆ, KIADB ಯಲ್ಲಿ 28(1) ಮಾಡುವುದು ಅಥವಾ 1(3) ಅಥವಾ 3(1)ರಲ್ಲಿ , ಇಲ್ಲಿ ಒಂದು industrial area ನಾವು ಮಾಡುತ್ತೇವೆಂದು ಸೂಚನೆ ಕೊಡುವುದು, ನಿನ್ನೆ ಇಲ್ಲಿ ಸೋಮಣ್ಣನವರು ಹೇಳುತ್ತಿದ್ದರು. ನಿನ್ನ ಜಾಗ ನಾವು industrial purposeಗೆ ತೆಗೆದುಕೊಳ್ಳುತ್ತಿದ್ದೇವೆಂದು ಲ್ಯಾಂಡ್ ಓನರ್‌ಗೆ ಒಂದು ಮೇಸೇಜ್ ಹೋಗುತ್ತದೆ. ಅವರನ್ನು ಕರೆಸುವುದು. ಅವರ ಹತ್ತಿರ ವ್ಯಾಪಾರ ಮಾಡಿ GPA ಮಾಡಿಕೊಳ್ಳುವುದು. ರಿಜಿಸ್ಟರ್ ಮಾಡಿಕೊಳ್ಳುವುದು, notification drop ಮಾಡುವುದು. 28(1)ರಲ್ಲಿ ಆಗಿರುವುದನ್ನು 28(4)ಒಳಕ್ಕೆ ಬರುವುದರೊಳಗೆ, ನಾವು drop ಮಾಡಿಕೊಳ್ಳಬಹುದು ಎಂದು ಹೇಳಿ

ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. 28(1)ಕೊಡುವುದು, ಆ ಜಮೀನನ್ನು ಇವರಿಗೆ ಬೇಕಾದವರಿಗೆ ಕ್ರಯ ಮಾಡಿಸಿ ಕೊಡುವುದು, ಆಮೇಲೆ ಅವರಿಗೇ ಮಾರುವುದು. ಒರಿಜಿನಲ್ ಓನರ್ಸ್ ಲಿಸ್ಟ್ ತಮಗೆ ಕೊಡುತ್ತೇನೆ. ನಾನು ತಮಗೆ ಹೇಳಿದೆ, ಅವರ ಅರ್ಜಿಗಳು ಅವರು ಎಷ್ಟಕ್ಕೆ ಮಾರಿಕೊಂಡಿದ್ದಾರೆ, ಸೆಕೆಂಡ್ ಪಾರ್ಟಿ, ನೋಟಿಫಿಕೇಷನ್ ಆದ ಮೇಲೆ ಕ್ರಯ ಮಾಡಿಸಿಕೊಂಡವರು ಮತ್ತೆ ಎಷ್ಟು ಅಕ್ವಿಸಿಷನ್ ಕಾಸ್ಟ್ ತೆಗೆದುಕೊಂಡಿದ್ದಾರೆಂದು ಹೇಳಿದೆ. ಒಂದು ಲಕ್ಷ, ಎರಡು ಲಕ್ಷಕ್ಕೆ ಒರಿಜಿನಲ್ ರೈತರ ಹತ್ತಿರ ನೀವು ಹಣ ತೆಗೆದುಕೊಳ್ಳುತ್ತೀರಿ. ಆ ನಂತರ ಕೊಂಡು ಕೊಂಡವನಿಗೆ 5 ಲಕ್ಷ ರೂಪಾಯಿ compensation ಕೊಡುತ್ತೀರಿ. ನಾನು ಇಲ್ಲಿ ಛಾರ್ಜ್ ಮಾಡುತ್ತಿದ್ದೇನೆ, ತಾವು ತನಿಖೆ ಮಾಡಬೇಕು. Who is this Pushpalatha? Who is Rudresh? Who is Rajashekhar? Who is Shivkumar? How much land they posses today? How much land they have purchased today? Where is the amount? ಅವರಿಗೆ ಎಲ್ಲಿಂದ ಹಣ ಬಂದಿತು? ಏನು tax payee ಗಳಾ? ಇದು ಯಾರಾದರೂ ನಮಗೆ ಹೇಳಬೇಕಲ್ಲಾ ಸರ್? ನಾನು ನಿಮಗೆ ಹೇಳುತ್ತೇನೆ, ಎಷ್ಟು ಚೆನ್ನಾಗಿದೆ ಎಂದರೆ, I cannot disclose from where I got this document. ಬಿ.ಎಂ.ಕಾವಲ್. ಸೇಲ್ ಡೀಡ್– ಶಾಂತಿ ಬಿ. ಅವರಿಂದ ಪುಷ್ಪಲತರವರಿಗೆ ತಾವು ಎರಡು ಎಕರೆ ಕೊಟ್ಟಿರಿ. Registered on 17.12.04. Land cost Rs.1,68,000. Incidental charges Rs.20,000, Registered D.D. Rs.1,35,000, Registration fee Rs.15,500, stamp vendor Rs.4,000, brokerage Rs.20,000 ಇಲ್ಲಿ ನೀವು KIADB ಗೆ NOC ಕೊಡಲಿಕ್ಕೆ ಎಷ್ಟೆಷ್ಟು brokerage ಕೊಟ್ಟಿದ್ದೀರಿ ಎಂದು ದಾಖಲೆ ಇದೆ. ಬನ್ನಿಕುಪ್ಪೆಯಲ್ಲಿ ಒಂದು NOC ಗೆ ನಿಮ್ಮ KIADB ಎಷ್ಟು ತೆಗೆದುಕೊಂಡಿದೆ ಎಂದು ನೋಡಿ. ಎನ್.ರಾಜಣ್ಣನವರು ಬ್ಯಾಡರ ವೆಂಕಟಪ್ಪ ಅಂಡ್ ಅದರ್ಸ್‌ನಂದ ತೆಗೆದುಕೊಂಡಿರುವ -ಜಮೀನನಲ್ಲಿ ಒಂದು ಎಕರೆ 8 ಗುಂಟೆಗೆ, he gives brokerage of Rs.8.000. NOC ಗೆ 8,000 ಕೊಟ್ಟಿದ್ದೇನೆಂದು ರೆಕಾರ್ಡ್ ಇದೆ ಇಲ್ಲಿ. ಒರಿಜಿನಲ್ ಕಾಸ್ಟ್ ಎಷ್ಟು, white money ಎಷ್ಟು, block money ಎಷ್ಟು, ಅಲ್ಲಿ ರಿಜಿಸ್ಟರ್ ಆಗಿರುವುದು ಎಷ್ಟು ಎಂದು ಹೇಳಿ, ನಾವು ಇವತ್ತು

ದಾಖಲೆಯನ್ನು ಈ ಸಭೆಯ ಮುಂದಿಡುತ್ತಿದ್ದೇನೆ. ಇದರ ಪ್ರಕಾರ land valuation 70 ಕೋಟಿ ರೂಪಾಯಿ ಕಡಿಮೆ ಆಗಿದೆ. 70 ಕೋಟಿ ರೂಪಾಯಿಗೆ stamp ಇಲ್ಲದ ಹಾಗಾಗಿದೆ. ಎರಡನೆಯದು, ತಾವು ಇವತ್ತು ಶಾಮೀಲಾಗಿದ್ದೀರಿ. NOC ಕೊಡುತ್ತಿದ್ದೀರಿ. NOC ತೆಗೆದುಕೊಂಡು ಎಲ್ಲಾ ಅವರಿಗೆ ಬೇಕಾದವರಿಗೆ ಕೊಟ್ಟಿದ್ದಾರೆ. ಈ ಲಿಸ್ಟ್‌ನಲ್ಲಿ ಪ್ರಮುಖವಾಗಿ figure ಆಗುತ್ತಿರುವುದು, ಪುಷ್ಪಲತ, ಬಿ.ಸಿ.ಶಿವಕುಮಾರ್, ನಿರ್ಮಲ, ರಾಜಶೇಖರ್, ಪಾರ್ವತಮ್ಮ, ಮಂಜುಳ, ಉಷಾ, ರೇಣುಕಯ್ಯ, ರಾಜಣ್ಣ are all related to one and each other. They are all related to one each other. ಇಲ್ಲಿ ತನಿಖೆಯಾಗಬೇಕು. ಇದು ಓದುವುದಕ್ಕೆ ಬಹಳ ಸಮಯವಾಗುತ್ತದೆ. ನನಗೆ ನೀವು ಸಮಯ ಕೊಟ್ಟಿಲ್ಲ. ಈ ಪೇಪರ್‌ಗಳನ್ನು ಕಳಿಹಿಸುತ್ತೇನೆ, ತಾವು ಒಂದು ಸಾರಿ ಪರಾಂಬರಿಸಬೇಕು. ಅವರು ಎಷ್ಟು ಜಮೀನು ತೆಗೆದುಕೊಂಡಿದ್ದಾರೆ? ಅವರು ಹೇಗೆ ತೆಗೆದುಕೊಳ್ಳುತ್ತಾರೆ? Where do they file accounts? Where do they give records of their income? ಇದು ನಮಗೆ ಗೊತ್ತಾಗಬೇಕು. ನಾನು ಈಗ ಇದನ್ನು ಹೇಳುತ್ತಾ ಹೋದರೆ, ದೊಡ್ಡ ಪ್ರಮಾಣದ scandle ಆಗಿದೆ. ಇವತ್ತು ಏನಾಗಿದೆ ಎಂದು ಒಂದೊಂದು ಊರಿನದನ್ನು ಹೇಳುತ್ತಾ ಹೋಗುತ್ತೇನೆ. ಬಿ.ಎಮ್. ಕಾವಲ್‌ನಲ್ಲಿ 29 ಎಕರೆ 8 ಗುಂಟೆ ಹೀಗೆ ಮಾಡಿದ್ದೀರಿ. ಬನ್ನಿಕುಪ್ಪೆಯಲ್ಲಿ 13 ಎಕರೆ 12 ಗುಂಟೆ ಮಾಡಿದ್ದೀರಿ, ದೊಡ್ಡಕುಂಟನಹಳ್ಳಿಯಲ್ಲಿ 40 ಎಕರೆ 20 ಗುಂಟೆ ಹೀಗೆ ಮಾಡಿದ್ದೀರಿ ನೀವು. ಗೋಣಿಪುರದಲ್ಲಿ 10 ಎಕರೆ 33 ಗುಂಟೆ ಮಾಡಿದ್ದೀರಿ, ಕಲ್ಲೇನಹಳ್ಳಿಯಲ್ಲಿ 41 ಎಕರೆ 33 ಗುಂಟೆ ಮಾಡಿದ್ದೀರಿ, ಸೀಗೆಹಳ್ಳಿಯಲ್ಲಿ 8 ಎಕರೆ ಮಾಡಿದ್ದೀರಿ, ತಿಪ್ಪೂರಿನಲ್ಲಿ 20 ಎಕರೆ 10 1/4 ಗುಂಟೆ ಮಾಡಿದ್ದೀರಿ, ಕೊಮ್ಮಘಟ್ಟ 2 ಎಕರೆ, 28 ಗುಂಟೆ ಮಾಡಿದ್ದೀರಿ, ಕುರುಬರಕೆರೆ ಹಳ್ಳಿಯಲ್ಲಿ.. ಹೀಗೆ ಲೆಕ್ಕ ಇಲ್ಲದಷ್ಟು ಜಾಗವನ್ನು NOC ಕೊಟ್ಟು, after the acquisition is over and after six to seven years, 6-7 ವರ್ಷಗಳಾದ ಮೇಲೆ NOC ಕೊಟ್ಟು ಒರಿಜಿನಲ್ ಓನರ್‌ನಿಂದ ಇವರಿಗೆ ಬೇಕಾದವರಿಗೆ ರಿಜಿಸ್ಟರ್ ಮಾಡಿ ಕೊಡಲಿಕ್ಕೆ ಇವತ್ತು KIADB ಯವರು NOC ಕೊಡುತ್ತಿದ್ದಾರೆ. ಇದರಿಂದ ಇಡೀ ಬೆಂಗಳೂರಿನಲ್ಲಿ KIADB industrial purpose ಗಾಗಿ ಜಮೀನನ್ನು acquire ಮಾಡಿಕೊಳ್ಳುವಂತಹ ಏಜನ್ಸಿಯಾಗಿ ಉಳಿದಿಲ್ಲ. This is a trading

Agency. Scetion 11ನಲ್ಲಿ ಅಥವಾ 4(1)ನಲ್ಲಿ revenue ನಲ್ಲಿ land acquisition ಮಾಡಿದರೆ ಇದು ವಾಪಸ್ ಕೊಡಬಹುದು, ಕೈಬಿಡಬಹುದು, ಅದನ್ನು ಮೀರಿ ನಿಮ್ಮ ರೆವಿನ್ಯೂ ಅಕ್ವಿಸಿಷನ್‌ನನ್ನು, BDA acquisitionನ್ನು country, city planning acquisition ಅನ್ನು ಮೀರಿ ಏಕೆ ನಿಮ್ಮ KIADB ಯನ್ನು ಮೇಲಕ್ಕೆ ಇಟ್ಟುಕೊಂಡಿರಿ ಎಂದರೆ, ಎಲ್ಲ ಅಕ್ವಿಸಿಷನ್ ಮೀರಿ ನೀವು ಜಮೀನನ್ನು ಗುಳುಂ ಮಾಡುವುದು 28(4), 28(6) ಆದ ಮೇಲೆ ಯಾವ ಕಾರಣಕ್ಕೂ ಅವನಿಗೆ ವಾಪಸ್ ಕೊಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿ, ಕಾನೂನು ಮಾಡಿಕೊಂಡಿರುವುದು ಮಾಡಿ, ಇಡೀ ಜಾಗವನ್ನು ಇವತ್ತು ತಿಂದು ಹಾಕುವ ಪರಿಸ್ಥಿತಿಯಲ್ಲಿದ್ದಾರೆ. ಇಲ್ಲಿ ಏನಾಗಿದೆ, acquire ಮಾಡಿಬಿಟ್ಟರು, ಇವರ ಪೊಸೆಷನ್‌ನಲ್ಲಿತ್ತು, ರಮೇಶ್‌ಕುಮಾರ್‌ರವರ ಜಮೀನು ನಾನು ತೆಗೆದುಕೊಂಡೆ, ಆ ಮೇಲೆ ರಮೇಶ್ ಕುಮಾರ್‌ರವರ ಹತ್ತಿರ ನಾನು ಒಂದು ಅರ್ಜಿ ಬರೆಸಿಕೊಂಡು ಬಿಟ್ಟೆ. ಆರು ವರ್ಷವಾಯಿತು, ಏಳು ವರ್ಷವಾಯಿತು, ಎಂಟು ವರ್ಷವಾಯಿತು. ಜಮೀನು ತೆಗೆದುಕೊಂಡು ನೀವು ನನಗೆ ಏನೂ ಪರಿಹಾರ ಕೊಡಲಿಲ್ಲ, ಇತ್ಯರ್ಥ ಮಾಡಲಿಲ್ಲ ನೀವು, ನಾನು ಇದನ್ನು ಮಾರಲಿಕ್ಕೆ ಅನುಮತಿ ಕೊಡಿ ಎಂದು ಹೇಳುವುದು, ನಾನು ನಿಮಗೆ NOC ಕೊಟ್ಟು ಗೈಡೆನ್ಸ್ ವ್ಯಾಲ್ಯೂಗೆ ನೀವು ಮಾರಿಕೊಳ್ಳಿ ಎಂದು ಹೇಳುವುದು. ನಿಮ್ಮ ಇಷ್ಟ ಬಂದ ರೇಟ್‌ಗೆ ಕೊಡಲಿಲ್ಲ ನಾನು. KIADBಯವರು ಅಕ್ವೈರ್ ಮಾಡಿದ ಸೈಟನ್ನು ಗೈಡೆನ್ಸ್ ವ್ಯಾಲ್ಯೂಗೆ ಮಾರುವುದಕ್ಕೆ ಅನುಮತಿ ಕೊಡುತ್ತೇವೆ. ಗೈಡೆನ್ಸ್ ವ್ಯಾಲ್ಯೂಗೆ ತೆಗೆದುಕೊಂಡವನು ಈಗ ಏನು ಮಾಡುತ್ತಿದ್ದಾನೆ? Final acquisition ನಲ್ಲಿ ಅವನು compensation ತೆಗೆದುಕೊಳ್ಳುತ್ತಿದ್ದಾನೆ ಅಥವಾ he has become owner of the property which land was earlier procured by KIADB is now transferred to others through KIADB. ಈ ದಂಧೆಯನ್ನು ಮಾಡಲಿಕ್ಕೆ KIADB ಇಟ್ಟುಕೊಂಡಿದ್ದೀರಾ? ಒಂದೊಂದು ಉದಾಹರಣೆ ನಿಮಗೆ ಹೇಳಬೇಕೆಂದರೆ, ಇದಕ್ಕೆ notification issue ಮಾಡಿದ್ದಾರೆ. ಇಂತಿಂತಹ ಜಮೀನುಗಳನ್ನು ನೀವು ಮಾರಿಕೊಳ್ಳಬಹುದು ಎಂದು. ಇವರು ರೈತರಿಂದ ಅರ್ಜಿಗಳನ್ನು ತೆಗೆದುಕೊಳ್ಳುತ್ತಾರೆ. ಮಲ್ಲಯ್ಯ ಸತ್ತಪ್ಪ ತಿಪ್ಪಟಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಸೀಗೆಹಳ್ಳಿ ಗ್ರಾಮದ ಸರ್ವೇ ನಂ.3

ರಲ್ಲಿರುವ ಎರಡು ಎಕರೆ ಜಮೀನು ನನ್ನ ಹೆಸರಿನಲ್ಲಿ ಖಾತೆ ಇದ್ದು ನಾನೇ ಸಾಗುವಳಿ ಮಾಡುತ್ತಿದ್ದೇನೆ. 1997–98 ನೇ ಸಾಲಿನಲ್ಲಿ KIADB ವತಿಯಿಂದ ಕಾಯಿದೆ 66ರ ಕಲಂ 28(1) ರ ಪ್ರಕಾರ ಅಧಿಸೂಚನೆ ಆಗಿರುತ್ತದೆ. ಕಳೆದ ಏಳೆಂಟು ವರ್ಷಗಳಿಂದಲೂ ಅಧಿಸೂಚನೆ ಹೊರಡಿಸಿದ್ದು ಇದುವರೆಗೂ ಯಾವುದೇ ಭೂಸ್ವಾಧೀನ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ನನಗೆ ಜಮೀನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ, ನಾನು ರೈತ ಕುಟುಂಬದಿಂದ ಬಂದಿದ್ದೇನೆ, ಎಂದು ಬರೆದುಕೊಂಡು ಬಂದು, ಆದ್ದರಿಂದ ತಾವು ಹೊರಡಿಸಿರುವ ಅಧಿಸೂಚನೆಯಂತೆ ಮೇಲ್ಕಂಡ ಜಮೀನನ್ನು ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಕೋರುತ್ತೇನೆ. KIADB ಯಲ್ಲಿ ವಿಷಿಯೇಟ್ ಆಗುವುದಿಲ್ಲ. ಪ್ರಕಾಶ್‌ರವರೆ, ಅದು ದುರಂತ. ನಿಮ್ಮಲ್ಲಿ ರೆವಿನ್ಯೂ ಆಕ್ಟ್‌ನಲ್ಲಿ ಅಕ್ವಿಸಿಷನ್ ವಿಷಿಯೇಟ್ ಆಗುತ್ತದೆ. KIADBನಲ್ಲಿ ನೀವು special provision ಮಾಡಿಕೊಂಡಿದ್ದೀರಿ. ವಿಷಿಯೇಟ್ ಆಗುವುದಿಲ್ಲ. Judgment ಕೂಡ ಸ್ಪಷ್ಟವಾಗಿ ಹೇಳಿದೆ, ವಿಷಿಯೇಟ್ ಆಗುವುದಿಲ್ಲವೆನ್ನುವ ಒಂದೇ ಕಾರಣಕ್ಕೆ don't keep the proceedings for many years ಎಂದು ಹೇಳಿದೆ.

ಶ್ರೀ ಎಂ.ಪಿ. ಪ್ರಕಾಶ್: KIADB ಯಲ್ಲಿ ವಿಷಿಯೇಟ್ ಆಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಮ್ಮ Land Acquisition Act ನಲ್ಲಿ ವಿಷಿಯೇಟ್ ಆಗುತ್ತದೆ. 4(1) to 6(1) ಗೆ ವಿಷಿಯೇಟ್ ಆಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: Certain decisions have come from the Supreme Court where they have made it mandatory. ಏನು ಮಾಡುತ್ತಿದ್ದರು ಎಂದರೆ, Industrial Area Development Board, Slum Board ನವರು ನೋಟಿಫೈ ಮಾಡುವುದು, ಬಿಟ್ಟು ಬಿಡುವುದು, ಇನ್ನು ಕೆಲವು ಕಡೆಗೆ ನೋಟಿಫಿಕೇಷನ್ ಕೂಡ ಇಲ್ಲ, 4(1) ನೋಟಿಫಿಕೇಷನ್ ಕೂಡ ಆಗಿರುವುದಿಲ್ಲ. Intention to acquire ಎಂದು ಹೇಳಿ ನೋಟಿಫಿಕೇಷನ್ ಹೊರಡಿಸಿ ಹಾಗೆಯೇ ಬಿಟ್ಟುಬಿಡುವುದು. ಈ ರೀತಿ ಕೂಡ ಆಗಿದೆ.

ಶ್ರೀ ಎಂ.ಪಿ.ಪ್ರಕಾಶ್ :–ಆ ರೀತಿಯೂ ಆಗಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನೊಳಗೆ ಸೆಕ್ಷನ್ 48

ಕೆಳಗಡೆ ಎಲ್ಲವೂ ಮುಕ್ತಾಯವಾಗಿದ್ದರೆ, ಅದರೊಳಗೆ ಎಷ್ಟೋ ಸಲ ಪೊಸೆಶನ್‌ಗೆ ತೆಗದುಕೊಳ್ಳದೆಯೇ ಹಾಗೆಯೇ ಬಿಟ್ಟಿರುತ್ತಾರೆ ಅಥವಾ ಅಭಿವೃದ್ಧಿ ಆಗದಂತೆ ಬಿಟ್ಟಿರುತ್ತಾರೆ. ಇನ್ನೂ ಕೆಲವರು ಪೊಸೆಶನ್‌ಗೆ ತೆಗೆದುಕೊಂಡಿದ್ದರೂ ಮುಂದಿನ ಕ್ರಮ ತೆಗೆದುಕೊಂಡಿಲ್ಲದೇ ಇರುವವರೂ ಇರುತ್ತಾರೆ.

ಶ್ರೀ ರಮೇಶ್‌ಕುಮಾರ್:– what he reads out ಇಲ್ಲಿ ನೋಟಿಫಿಕೇಶನ್ ಆಗಿದೆಯಷ್ಟೆ. ನೋಟಿಫಿಕೇಷನ್ ಆಗಿ ಆರೇಳು ವರ್ಷವಾಗಿ ಹೋಗಿದೆ. ನೀವು ಮುಂದಿನ ಕ್ರಮವನ್ನೇನೂ ಜರುಗಿಸಿಲ್ಲ ಎಂದು petitioner ಹೇಳುತ್ತಾರೆ. ಆ ರೀತಿ ಇದ್ದಾಗ ಆಟೋಮ್ಯಾಟಿಕಲಿ ಲ್ಯಾಪ್ಸ್ ಆಗಬೇಕಲ್ಲವೇ? Vitiate ಆಗಬೇಕಲ್ಲವೇ?

ಶ್ರೀ ಎಂ.ಪಿ.ಪ್ರಕಾಶ್:– ಅದರ ಬಗ್ಗೆ ಆ್ಯಕ್ಟ್‌ನೊಳಗೆ ಏನು ಇದೆ ಎಂಬ ಬಗ್ಗೆ I have no knowledge. I will try to find it out.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:– ಒರಿಜಿನಲ್ ಲ್ಯಾಂಡ್ ಅಕ್ವಿಸಿಶನ್ ಆ್ಯಕ್ಟ್‌ನಲ್ಲಿ ಏನು ಹೇಳಲಾಗಿದೆಯೆಂದರೆ ಎರಡು ವರ್ಷವಾದ ಮೇಲೂ ಅಭಿವೃದ್ಧಿಪಡಿಸದಿದ್ದರೆ ಸ್ವಾಧೀನಪಡಿಸಿಕೊಂಡದ್ದನ್ನು ರೈತರಿಗೆ ವಾಪಸ್ಸು ಕೊಡಬೇಕೆಂದು ಇದೆ. ಆದರೆ ಕೆ.ಐ.ಎ.ಡಿ.ಬಿ.ನಲ್ಲಿ ಸೆಕ್ಷನ್ 28(1)ನಲ್ಲಿ ಆದ ಮೇಲೆ ನಿಗದಿತ ಸಮಯದಲ್ಲಿ ಮತ್ತೆ ರೈತರಿಗೆ ವಾಪಸ್ಸು ಕೊಡುವುದಾಗಲಿ ಅಥವಾ ಈ ಅಧಿಸೂಚನೆಯನ್ನು ಏನು ಹೊರಡಿಸಿರುತ್ತೀವಿ ಅದು ಲ್ಯಾಪ್ಸ್ ಆಗುತ್ತದೆ ಎನ್ನುವ ಪದವನ್ನು ಇದರಲ್ಲಿ ಬಳಸಿಲ್ಲ. That is silent. ಈ ಆ್ಯಕ್ಟ್‌ನಲ್ಲಿ ಆ ಪ್ರಾವಿಶನ್ ಇಲ್ಲ. 1990 ರಿಂದ 1996–97 ರಲ್ಲಿಯೂ ಕೂಡ ಕೆ.ಐ.ಎ.ಡಿ.ಬಿ ವತಿಯಿಂದ ಏನು ಭೂಮಿಯನ್ನು ಸ್ವಾಧೀನ ಮಾಡಿಕೊಂಡಿದ್ದೇವೋ ಅದರ ಬಗ್ಗೆ ಈ ಆ್ಯಕ್ಟ್‌ನಲ್ಲಿ ಪ್ರಾವಿಶನ್ ಇಲ್ಲದೇ ಇರುವ ಕಾರಣಕ್ಕಾಗಿ ಆ ಭೂಮಿಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ. ಆ ಕಡೆ ರೈತರಿಗೂ ಅನುಕೂಲವಾಗಲಿಲ್ಲ. ಈ ಕಡೆ ಸರ್ಕಾರದ ಕೈಗೂ ಬಂದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಸರ್ ಪ್ರಕಾಶ್‌ರವರೆ, R.V.Ravindran, Judge held even if Section 11(a) of L.A. Act is not applicable it

does not follow that passing of the award can be unduly delayed.If there is inordinate delay in making the award and such delay is not satisfactorily explained, the court may either quash the acquisition proceedings or postpone the relevant date of fixing the market value to a suitable later date or award some additional compensation. Vitiate ಆಗುತ್ತದೆ ಎಂದು ಹೇಳಿಲ್ಲ. It will be appropriate if the petitioner is awarded an additional amount of compensation for the delay in passing the award to be calculated at the rate of 6% per annum from 08.08.1998. Particular case ನಲ್ಲಿ. So, it is clear. Vitiate ಆಗೋಲ್ಲ.

ಶ್ರೀ ಎಂ.ಪಿ. ಪ್ರಕಾಶ್ :-ಇದು ಸೈಲೆಂಟ್ ಆಗಿರುವುದರಿಂದ ಮುಂದೆ ಇದರ ಬಗ್ಗೆ ತಿದ್ದುಪಡಿ ತರುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀ ಕೆ.ಆರ್. ರಮೇಶಕುಮಾರ್:- ಮದರ್ ಆ್ಯಕ್ಟ್ ಬಂದು ಸೆಂಟ್ರಲ್ ಆ್ಯಕ್ಟ್. It is an agency which acquires or expected to acquire lands for a specific purpose. The Acquisition Act is the basic Act. ಅದರ ಪ್ರಾವಿಷನ್ ಇದರ ಮೇಲೆ ಬೈಂಡಿಂಗ್ ಆಗಿರುತ್ತದೆ. Even if it is silent, I think you have to draw inference. There are judjements in the Supreme Court.

ಶ್ರೀ ಜೆ.ಸಿ.ಮಾಧುಸ್ವಾಮಿ:-ಸರ್ ಒಂದ್ನಿಮಿಷ. Section 28(5) and (6) and 30 , Land Acquisition Act, 1894 Section 11(A) Delay in awarding compensation: Inapplicability of provision of Central Act requiring passing of award within specified time to acquisition under State Act award must be passed within reasonable time. ಆದರೆ ಆಗಲಿಲ್ಲ ಇಲ್ಲಿ. ಇದಕ್ಕೆ ಸೆಂಟ್ರಲ್ ಆ್ಯಕ್ಟ್ ಅಪ್ಲೈ ಆಗಲಿಲ್ಲವಂತೆ. In case of unexplained delay Court may quash acquisition proceedings or postpone the relevant date of fixing the market value to a suitable

later date or award some additional compensation by way of interest. Vitiate ಆಗೋಲ್ಲ. ನಿಮ್ಮಲ್ಲಿ ಆಟೋಮ್ಯಾಟಿಕಲಿ Vitiate ಆಗಿಬಿಡುತ್ತದೆ. ಆದುದರಿಂದ ಇವರಿಗೆ ಏನು ಅವಕಾಶವಾಗಿ ಬಿಟ್ಟಿದೆ ಇವರಿಗೆ ಎಂದರೆ, ಒಂದು 1(3), 3(1) ಮಾಡಿ ಕೈಬಿಟ್ಟು ಬಿಡುತ್ತಾರೆ, telling that this land is required for industrial purpose ಅಂತ. ಇನ್ನೊಂದು ಸೆಕ್ಷನ್ 28(1) ಹಾಕಿ ಕೈಬಿಟ್ಟು ಬಿಡುತ್ತಾರೆ. ದುರಂತ ಇಲ್ಲಿ ಏನಾಗಿದೆ ಎಂದರೆ, ನಾನು ಈ ರೀತಿ ನಾಯ್ಡುರವರು ಮಾಡುತ್ತಾರೆ, ಇನ್ನೊಬ್ಬರು ಮಾಡುತ್ತಾರೆ ಎಂದು ಹೇಳುವುದಿಲ್ಲ. 28(1) ಆದನಂತರ ಇಲ್ಲಿ ಸ್ಟಾರ್ಟ್ ಆಗುತ್ತದೆ ದಂಧೆ. 28(1) ಆಗಿ 28(4) ಆಗುವವರೆಗೆ ಯಾವುದನ್ನಾವರೂ ಬಿಡಬಹುದು, ಯಾವುದನ್ನಾದರೂ ಇವರು ತೆಗೆದುಕೊಳ್ಳಬಹುದು. 28(1) ಆಗುತ್ತಿದ್ದಂತೆ apprehension start ಆಗುತ್ತದೆ ಒಬ್ಬ ಮನುಷ್ಯನಿಗೆ ನನ್ನ ಜಮೀನು ಹೋಗಿಬಿಡುತ್ತದೆಂದು. ಆಗ ಆ ದಂಧೆ ವ್ಯಾಪಾರ ಶುರುವಾಗುತ್ತದೆ. ನನಗೆ 5 ಲಕ್ಷ ಸಿಗುತ್ತದೆ, 6 ಲಕ್ಷ ಸಿಗುತ್ತದೆ, ಆದರೆ ನಾನು 10 ಲಕ್ಷ ಕೊಡುತ್ತೇನೆ, 15 ಲಕ್ಷ ಕೊಡುತ್ತೇನೆ, 20 ಲಕ್ಷ ಕೊಡುತ್ತೇನೆ ಎಂದು ಶುರುಮಾಡಿ ಆ ಜಮೀನನ್ನು ಬೇಕುಬೇಕಾದವರಿಗೆ ಒಂದು ಕಡೆ ಜಿ.ಪಿ.ಎ. ಮಾಡಿಸಿಕೊಡುವುದು ಅಥವಾ ರಿಜಿಸ್ಟರ್ ಮಾಡಿಸುವುದು ಅಥವಾ ಇವರೇ ಎನ್.ಒ.ಸಿ. ಕೊಟ್ಟು ರಿಜಿಸ್ಟರ್ ಮಾಡಿಸುವುದು. How can they do it? When once the land is under 28(1) ಎನ್.ಒ.ಸಿ. ಕೊಟ್ಟು ನೀವು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಮಾಲೀಕನಿಗೆ ಅವಕಾಶವನ್ನು ನೀವು ಹೇಗೆ ಕೊಟ್ಟಿರಿ? ಅಧಿಕಾರ ಹೇಗೆ ಕೊಟ್ಟಿರಿ? When the very purpose of industrialization of that area is made known to public, ಮಾರುವುದಕ್ಕೆ ಏಕೆ ಬಿಟ್ಟಿರಿ? ಇವತ್ತು ಈ ರೀತಿಯ ದೊಡ್ಡ ದಂಧೆ ಕೆ.ಐ.ಎ.ಡಿ.ಬಿ.ಯಲ್ಲಿ ಆಗುತ್ತಿದೆ ಸರ್. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, Yes, the very object when the Act was constituted, was to acquire land for industrial purpose. ಆದರೆ ಆನಂತರ ಬಂದ ಸರ್ಕಾರಗಳು ಇದರ ಜೊತೆಗೆ ಸೆಕ್ಷನ್ 11ಕ್ಕೆ ಒಂದು ಅಮೆಂಡ್‌ಮೆಂಟ್ ತಂದುಬಿಟ್ಟರು. I think it is for Section 11, ನಾಯ್ಡುರವರೆ. ಸೆಕ್ಷನ್ 11ಕ್ಕೆ ಏನು ತಂದರೆಂದರೆ, ಇಂಡಸ್ಟ್ರಿಯಲ್ ಪರ್ಪಸ್ ಎನ್ನುವುದನ್ನು ಇನ್‌ಫ್ರಾಸ್ಟ್ರಕ್ಚರ್ ಎಂದು ಸೇರಿಸಿಕೊಂಡು ಬಿಟ್ಟರು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:-ಅದನ್ನು ಯಾರು ತಂದರು?

ಶ್ರೀ ಜೆ.ಸಿ.ಮಾಧುಸ್ವಾಮಿ:- ನೀವು ಎಂದು ನಾನು ಹೇಳಲಿಲ್ಲ. ನೀವಿನ್ನೂ ಅದನ್ನು ಓದಿಯೇ ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :-ಇನ್‌ಫ್ರಾಸ್ಟ್ರಕ್ಚರ್ ಎಂದು ಅಮೆಂಡ್‌ಮೆಂಟ್ ತಂದಿರುವುದು 7(ಎ)ಗೆ. ನಾನು ಓದಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- 7(ಎ)ಗೆ ಅಮೆಂಡ್‌ಮೆಂಟ್ ತಂದರು ಯಾವಾಗ? 1997ರಲ್ಲಿ. Industrial infrastructure or facilities means facilities which contribute to the development of industries established in industrial area such as research and development, communication, transport, banking, marketing, technology parks and townships for the purpose of establishing trade and tourism centers and any other facility the State Government may by notification specify to be an industrial insfrastructural facility for the purpose of this Act. ಇವೆಲ್ಲದರದ್ದೂ, ಭೂಮಿ ಮೇಲೆ ನಡೆಯುತ್ತಿರುವ ಎಲ್ಲಾ ಚಟುವಟಿಕೆಗಳು ಇನ್‌ಫ್ರಾಸ್ಟ್ರಕ್ಚರ್ ಆ್ಯಕ್ಟಿವಿಟೀಸ್ ಕೆಳಗೆ ಬಂದುಬಿಟ್ಟಿತು. ಆ 7(ಎ)ಯನ್ನು ತಾವು ಇಂಟಟ್ರಿಡ್ಯೂಸ್ ಮಾಡಿದ ಮೇಲೆ 1997ರಲ್ಲಿ, ಅಲ್ಲಿಂದ ಇವೆಲ್ಲಾ ದಂಧೆಗಳೂ ಸ್ಟಾರ್ಟ್ ಆಯಿತು. ದಂಧೆ, ಗಾಲ್ಫ್ ಗ್ರೌಂಡ್, ಸ್ವಿಮಿಂಗ್‌ಪೂಲ್, ಹೋಟೆಲ್ಸ್, ರೆಸ್ಟೋರೆಂಟ್ಸ್, ಮಾರ್ಕೆಟ್ಸ್, ರೆಸಾರ್ಟ್ಸ್....

ಶ್ರೀ ಎಂ.ಪಿ.ಪ್ರಕಾಶ್:- ಒಂದ್ನಿಮಿಷ. ರಮೇಶ್‌ಕುಮಾರ್‌ರವರು ಏನು ಹೇಳಿದ್ದಾರೆ, ಅದರಲ್ಲಿ ಸೆಕ್ಷನ್ 28(4) ಮತ್ತು (5) ಮತ್ತು 30 ಕೆಳಗೆ ಲ್ಯಾಂಡ್ ಅಕ್ವಿಸಿಶನ್ ಬಗ್ಗೆ ಹೇಳುತ್ತಾ such land notified for the acquisition vests absolutely in the State Government free from all encumbrances. Once a declaration to that effect is published in Official Gazettee, irrespective of whether award or compensation has been passed or not, provision of Central act requiring making of an award within two years of declaration has no application

because the land has already vested with the State Government and there is no provision by which the land statutorily vested in the State Government can revert to owner. ಆದುದರಿಂದ ಅವರು ಹೇಳಿದ ಮಾತೇ ಕರೆಕ್ಟ್. ಜಡ್ಜ್‌ಮೆಂಟ್‌ನಲ್ಲಿ ಇದೆ ಆ ರೀತಿ. Obiter dicta ತರಹ ಇರಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ಇವೊತ್ತು ಕೆ.ಐ.ಎ.ಡಿ.ಬಿ. ಈ ಭೂಮಿ ವ್ಯವಹಾರದಲ್ಲಿ ಮದ್ಯವರ್ತಿ ತರಹ ಆಗಿಬಿಟ್ಟಿದೆ. ಇದರ ಬಗ್ಗೆ ಪೂರ್ಣ ಮಾಹಿತಿ ನೀಡುವವನದ್ದೆ. ಆದರೆ ನೀವು ನನಗೆ ಹೆಚ್ಚು ಸಮಯ ಕೊಡುವುದಿಲ್ಲ. ಬೆಂಗಳೂರಿನಲ್ಲಿಯೇ ಇವರು ಎಲ್ಲೆಲ್ಲೆ ಇವರು ಕೊಟ್ಟುಕೊಂಡು ಬಂದಿದ್ದಾರೆ ಎಂಬುದನ್ನು ತಾವು ನೋಡಬೇಕು. ಸೇಲ್‌ಡೀಡ್ ಎಲ್ಲಿ ಮಾಡಿದ್ದಾರೆ, ಎನ್.ಒ.ಸಿ.ಗಳದ್ದನ್ನೂ ನಾನು ಹೇಳಿದೆ. ಇನ್ನು ಎರಡನೆಯದಾಗಿ, ಇವರು ಡೀ-ನೋಟಿಫಿಕೇಶನ್ ಹೇಗೆ ಮಾಡುತ್ತಾರೆ, ಯಾರು ಮಾಡುತ್ತಾರೆ ಗೊತ್ತಿಲ್ಲ? ಸರ್, ಈ ಸಭೆಯಲ್ಲಿ ಹೇಳಿದರು, ಡೀ-ನೋಟಿಫಿಕೇಶನ್ ಮಾಡುವುದಿಲ್ಲ, ಎಲ್ಲೋ ಒಂದೋ ಎರಡೋ ಮಾಡಿದ್ದೇವೆಂದು ಹೇಳಿದರು. Lot of files are pending for de-notification today. ಶಾಸನ ಸಭೆ ಮುಗಿದ ನಂತರ ಒಂದೈವತ್ತು ಫೈಲ್ ಆದರೂ ಕ್ಲಿಯರ್ ಆಗುತ್ತವೆ. ನಾನು ನಿಮಗೆ ಡೀಟೈಲ್ಸ್‌ಗಳನ್ನು ಕೊಡುತ್ತೇನೆ. ನಾನು ಎಲ್ಲವನ್ನೂ ಓದಿಕೊಂಡು ಬಂದು ಇಲ್ಲಿ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು:- ಫೈಲ್‌ಗಳು ಇರಬಹುದು. ಆದರೆ ಅವುಗಳು ಕ್ಲಿಯರ್ ಆಗುತ್ತವೋ ಇಲ್ಲವೋ ಯಾರಿಗೆ ಗೊತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :- ರೆಕ್‌ಮೆಂಡ್ ಆಗಿಬಿಟ್ಟಿವೆಯಲ್ಲಾ. ಅತ್ತಿಬೆಲೆ ಹೋಬಳಿ ನೀಲಸಂದ್ರ ಗ್ರಾಮದ ಸರ್ವೆ ನಂ. 4, 5, 6, 7, 8, 9, 10, 11, 12, 13, 14, 16 ರ ಜಮೀನುಗಳನ್ನು ಭೂ ಸ್ವಾಧೀನದಿಂದ ಹೊರತುಪಡಿಸುವ ಬಗ್ಗೆ. ಇದು ಇದೆಯಲ್ಲಾ ಸರ್ ಇದರಲ್ಲಿ ಹೆಸರುಗಳು ಇವೆ, ನಾಳೆಯಿಂದ ವಿರಾಮವಾಗಿ ಇರುತ್ತೀರಿ, ನಾನು ನಿಮಗೆ ಕೊಟ್ಟು ಹೋಗುತ್ತೇನೆ, ಅವುಗಳನ್ನು ನೀವೇ ಓದಿಕೊಳ್ಳಿ. ನಂತರ ಹೆಬ್ಬಗೋಡು ಮತ್ತು ವೀರಸಂದ್ರ, ಹೆಬ್ಬಗೋಡಿನಲ್ಲಿ ಸರ್ವೆ ನಂಬರ್ 121/2, 121/3, 121/4. 121/

5 ಇವೆಲ್ಲಾ ಕೆಳಕಂಡ ಸದರಿ ಜಮೀನು ಸರ್ಕಾರಕ್ಕೆ ಅವಶ್ಯಕತೆ ಇಲ್ಲದ ಕಾರಣ ಜಮೀನನ್ನು ಸ್ವಾಧೀನ ಕ್ರಮದಿಂದ ಕೈಬಿಡಲು ಕರ್ನಾಟಕ ಕೈಗಾರಿಕ ಅಭಿವೃದ್ಧಿ ಕಾಯಿದೆ 66 ಕಲಂ 4 ರಲ್ಲಿ ಅನ್ವಯದತ್ತ ಅಧಿಕಾರವನ್ನು ಚಲಾಯಿಸಿ 3(1), 1(3) ಮತ್ತು 28(1)ರ ಅಧಿಸೂಚನೆಯಂತೆ ಸದರಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. ಆನೇಕಲ್ ಗ್ರಾಮ ಹೆಬ್ಬಗೋಡಿ ಮತ್ತು ವೀರಸಂದ್ರ. ಹಾಗೇ ಬಂದರೆ proposal for acquisition of land for industrial purpose under section….Ilavala, Mydanahalli village of Mysore Taluk. ಯಾವುದೋ ಸೊಸೈಟಿಯವರು ಕೇಳಿದರು ಎಂದು 90 ಎಕರೆ ಜಾಗವನ್ನು ಇವತ್ತು ಬಿಟ್ಟುಕೊಡುತ್ತಿದ್ದಾರೆ. ಆಮೇಲೆ ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿ ಚಿಕ್ಕನಾಗಮಂಗಲ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೊಡ್ಡ ನಾಗಮಂಗಲ ಗ್ರಾಮಗಳ ಸರ್ವೇ ನಂಬರ್ ಹಾಗೂ ಕಲಂ 3 ರಲ್ಲಿ ನಮೂದಿಸಿರುವ ವಿಸ್ತೀರ್ಣ ಹಾಗೂ 4ರಲ್ಲಿ ತೋರಿಸಿದ ಚೆಕ್ಕುಬಂದಿಗಳ ಜಮೀನನ್ನು ಘೋಷಣೆ ಮಾಡುವುದು. ಆಮೇಲೆ ಅದನ್ನು ಬಿಡುವುದು. ಇದನ್ನು ಓದಿ ಸರ್. ಇದು ಏನು ನಡೆಯುತ್ತಿದೆ? ಇವರಿಗೆ ಒಂದು land ಅನ್ನು acquire ಮಾಡಬೇಕೆಂದರೆ demand survey ಎಂದು ಮಾಡಬೇಕು. It is the basic feature of the KIADB's activity. ಒಂದು demand survey ಮಾಡಬೇಕಾದರೆ ಯಾರಾದರೂ ನಮಗೆ ಎಷ್ಟು ಜಮೀನು ಬೇಕು ಎನ್ನುವುದರ ಬಗ್ಗೆ ಅರ್ಜಿದಾರರಿಂದ receive ಮಾಡಿಕೊಳ್ಳಬೇಕು. ಯಾರ್‍ಯಾರೋ ನಾನು industry ಮಾಡುತ್ತೇನೆ, ಮತ್ತೊಂದು, ಮಗದೊಂದು ಮಾಡುತ್ತೇನೆ ಎಂದು applications ಕೊಡುತ್ತಾರೆ. ಆ ಆಧಾರದಲ್ಲಿ ಆ ಭಾಗದಲ್ಲಿ ಜಮೀನನ್ನು ಇವರು ಆಯ್ಕೆ ಮಾಡಬೇಕು, ನೋಡಬೇಕು. ಇದಕ್ಕೆ ಅವರೇ ಕಾಯಿದೆ ಮಾಡಿಕೊಂಡಿದ್ದಾರೆ. ಎಲ್ಲಿ ಕಟ್ಟಡ ಇರಬಾರದು, ಎಲ್ಲಿ ನೀರಾವರಿ ಇರಬಾರದು ಅಂತಹ ಜಾಗಗಳಲ್ಲಿ ಕೊಟ್ಟರೆ ಆಯ್ಕೆ ಮಾಡಿಕೊಳ್ಳಬೇಕಾಗಿತ್ತು. ಆದರೆ ಆಯ್ಕೆ ಮಾಡಲೇ ಇಲ್ಲ. ಇವತ್ತಿನವರೆಗೆ project proposals ಇಲ್ಲ. ಆ project ಗಳಲ್ಲಿ ಇಲ್ಲದ ಜಮೀನುಗಳಿಗೆ ಇವತ್ತು notice ಕೊಡುವುದು ಯಾರೂ ಇಲ್ಲ. ಯಾರೂ ನಿಮಗೆ ಈ ಜಾಗವನ್ನು ಕೇಳಿದರು? ಗೊತ್ತಿಲ್ಲ. ಏಕೆ acquire ಮಾಡುತ್ತಿದ್ದೀರಿ? ಗೊತ್ತಿಲ್ಲ. Suo motu, on their own notification

ಹಾಕುವುದು. ಬೆಂಗಳೂರಿನಲ್ಲಿ 28(1) notification ಮಾಡುವುದು. ಅವನು ಯಾರೂ ಇವನನ್ನು ನೋಡಿಕೊಂಡರೆ section 4 ಕೆಳಗೆ ಬಿಟ್ಟಿದ್ದೇವೆಂದು ಹೇಳುವುದು. ಇವರನ್ನು ನೋಡಿಕೊಳ್ಳಲಿಲ್ಲವಾ section 28(2), 28(3) followed by 28(4) ಎಂದು ಹೇಳುವುದು. ಈ ಸ್ಥಿತಿ ನಿರ್ಮಾಣವಾಗಿ ಇವತ್ತು ಏನಾದರೂ ಜನ ಬೆಂಗಳೂರಿನಲ್ಲಿ ಜಮೀನು ಇಟ್ಟುಕೊಂಡಿದ್ದರೆ ಯಾವಾಗ ನಮ್ಮ ಜಮೀನು ಹೋಗುತ್ತದೋ martial administration ಬಂದಿದೆ ಎಂದು ಕಾಯುವಂತಹ ಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಇದಕ್ಕೆ ಯಾವತ್ತು ಇತಿಶ್ರೀ ಹಾಡುವುದು? ಮಾನ್ಯ ಪ್ರಕಾಶ್‌ರವರು ಹೇಳಿದರು, when it cannot be vitiated, how can NOC be given to sell the property of Government. ನಾನು ಈಗ ಅಲ್ಲಿಗೆ ಬರುತ್ತೇನೆ. It cannot be vitiated because it is already the property of the State. When once it is taken over by the KIADB, ಅದು ಸರ್ಕಾರಿ ಆಸ್ತಿಯಾಯಿತು, ಹಾಗಾಗಿ vitiate ಆಗುವುದಿಲ್ಲ, ನಿಮ್ಮ Central Act ಅಲ್ಲಿಗೆ apply ಆಗುವುದಿಲ್ಲವೆಂದು ಮಾಡಿದಿರಿ. ನೀವು NOC ತೆಗೆದುಕೊಂಡು ಹೇಗೆ ವಾಪಸ್ಸು ಕೊಡುತ್ತಿದ್ದೀರಿ? ಹೇಗೆ ವಾಪಸ್ಸು ಬರಿಸುತ್ತೀರಿ? ನೀವು Supreme Court judgementಗೆ ಏನು ಉತ್ತರ ಹೇಳುತ್ತೀರಿ? ಅವನಿಗೆ 19 ಸಾವಿರ ಚಿಲ್ಲರೆ ಜಮೀನು ಇರಬೇಕು ಎಂದು ನೀವು ಹೇಳಿದ್ದೀರಿ. Excess land ಅನ್ನು ಈ ರಾಜ್ಯಕ್ಕೆ ಬಿಡಿಸಿಕೊಳ್ಳುತ್ತೇವೆ ಎಂದು ಹೇಳಿದಿರಿ. ಆದರೆ ಆ Excess land ಅನ್ನು ಎಲ್ಲಾ ಮಾರಾಟ ಮಾಡಿಸಿಬಿಟ್ಟಿದ್ದೀರಲ್ಲ. ಯಾವುದು ರಸ್ತೆಯ ಕೊನೆಯಲ್ಲಿ ಇತ್ತು, ಯಾವ ಜಮೀನನ್ನು ನೀವು ವಾಪಸ್ಸು ತೆಗೆದುಕೊಳ್ಳಬೇಕೆಂದು ಇದ್ದಿರಿ, it is already sold. It is already sold to a company employee; attender, peon, Manjunath by name, ಅವರ assistant, ಅವರ relatives ರುದ್ರೇಗೌಡ, ರುದ್ರೇಶಪ್ಪ, ಅವರೆಲ್ಲ ಯಾರು? ಅವರೆಲ್ಲ ಯಾರು ಎಂದು ಈ ಸಭೆ ಮುಂದೆ ವಿವರವನ್ನು ತೆಗೆದುಕೊಂಡು ಬನ್ನಿ. ಇದೆಲ್ಲ ದಂಧೆ ಮಾಡಿಸಿ ಕಣ್ಣೊರಿಸುವುದಕ್ಕೆ ಇವತ್ತು ನಮಗೆ ಹೇಳಿಕೆ ಕೊಡುತ್ತಿದ್ದೀರಿ, ನಾವು court ಮುಂದೆ ಭಾರೀ fight ಮಾಡುತ್ತಿದ್ದೇವೆ. Somashekar Reddy case ನಲ್ಲಿ frame work agreement ಮೀರಿ ಏನು activity ನಡೆಯಬಾರದು ಎಂದು ಹೇಳಿದೆ ಅದಕ್ಕೆ abide ಆಗಿದ್ದೇವೆ ಎಂದು ಹೇಳಿದಿರಿ. ನಿಮ್ಮ ಹತ್ತಿರ

alignment ಇಲ್ಲ. ಆದರೆ ನಿಮ್ಮ PWD Secretary alignment is complete ಎಂದು ನಿಮ್ಮ ಮುಂದೆ Statement ಹಾಕಿದ್ದಾರೆ. ಆದರೆ ಇವತ್ತು ನಿಮ್ಮ Pollution Control Board ನವರು High Court ಮುಂದೆ ಏನು affidavit ಹಾಕಿದ್ದಾರೆ ಎಂದು ಹೇಳಬೇಕು. 2001 ಅಥವಾ 2000ರಲ್ಲಿ ಏನು alignment ಅನ್ನು approve ಮಾಡಿದಿರಿ ಅದಕ್ಕೆ ಏನು clearance ಕೊಟ್ಟಿದ್ದೇನೆ, ಅದನ್ನು ಬಿಟ್ಟು ಇನ್ನು ಯಾವುದಕ್ಕೂ ಕೊಡುವುದಕ್ಕೆ ತಯಾರಿಲ್ಲ, ನನ್ನ ಮುಂದೆ ಯಾವುದೇ ಅರ್ಜಿ ಇಲ್ಲ. ಆ project ನವನು ಏನು ಹೇಳುತ್ತಾನೆ? ನನಗೆ 500 ಎಕರೆ extra ಜಮೀನು ಬೇಕು ಎಂದು ಕೇಳಿದ್ದಾನೆ. ಇವರು 500 ಎಕರೆ sanction ಮಾಡಿದ್ದಾರೆ, which has not gone, before the PCB at all. ಮೂರು ದಿವಸದಲ್ಲಿ High Court ಮುಂದೆ affidavit ಹೋಗಿದೆ. PCB never consents. Pollution Control Board consent ಇದಕ್ಕೆ ಕೊಡುವುದಿಲ್ಲ ಎಂದು ಆಗಿದೆ. ನೀವು ಆಗಲೇ ಜಮೀನನ್ನು ಕೊಟ್ಟು ಕುಳಿತಿದ್ದೀರಿ. ನಾನು ಮಾನ್ಯ ನಾಯ್ಡುರವರಿಗೆ ಒಂದು ಮಾತನ್ನು ಕೇಳುತ್ತೇನೆ, ನಿಜವಾಗಿ ಮನುಷ್ಯತ್ವ ಅಥವಾ ಆತ್ಮಸಾಕ್ಷಿ ಇದ್ದರೆ ಅವನ ಜಾಗ ಎಲ್ಲಿರುತ್ತದೆ ಎಂದು ಒಂದು alignment fix ಮಾಡಿ. ಕೊಡಿರಿ ಅವನಗೆ ಜಾಗ. ನಮ್ಮನ್ನೆಲ್ಲಾ ಏಕೆ ನೀವು villain ಮಾಡಿದ್ದೀರಿ? ತಡೆಯುತ್ತಾರೆ, ತಡೆಯುತ್ತಾರೆ, ರಸ್ತೆ ಆಗುವುದನ್ನು ತಡೆಯುತ್ತಾರೆ ಎಂದು ಏಕೆ ಹೇಳಿಸುತ್ತಿದ್ದೀರಿ? See, you have to accept Somashekar Reddy's case because, it is the decision of the Apex Court of India. ಜಾಗ ಕೊಡಿ. ಇವರು ಕೊಡುವುದಿಲ್ಲ, ಸರ್. ಅವನೇನೋ ದೊಡ್ಡದಾಗಿ ಹೇಳಿಕೊಂಡು ಕುಳಿತುಕೊಂಡಿದ್ದಾನೆ, Government is not co-operating ಎಂದು. ಇವತ್ತು ದೊಡ್ಡ ಮನುಷ್ಯರು, ಇವತ್ತಿನವರೆಗೆ ಆ ರಸ್ತೆ ಎಲ್ಲಿ ಹೋಗುತ್ತದೆ ಎಂದು ಅವನಗೆ fix ಮಾಡಲೇ ಇಲ್ಲ. ಯಾರೋ ಒಬ್ಬ ಶ್ರೀಧರ್ ಎನ್ನುವವನೊಬ್ಬನನ್ನು ಅಲ್ಲಿ ಏನಾದರೂ ಕೆಲಸ ಮಾಡಿಕೊಂಡು ನೀವು ಹೇಳಿದ್ದಕ್ಕೆ sign ಹಾಕುವುದಕ್ಕೆ register ಮಾಡುವುದಕ್ಕೆ ಇಟ್ಟುಕೊಂಡವನನ್ನು suspend ಮಾಡಿಬಿಟ್ಟು ನೀವು ರಾಜ್ಯದ ತುಂಬಾ ಮುಖ ಎತ್ತುಕೊಂಡು ತಿರುಗಾಡುತ್ತೀರಾ? Why you have not suspended your Principal Secretary, PWD, who was chairing the meeting on that day?

ತೀರ್ಮಾನ ತೆಗೆದುಕೊಂಡವನಲ್ಲ. PWD Secretary ಏನು ಮಾಡುತ್ತಿದ್ದರು? ಅವತ್ತು ಅವರು ಅಲ್ಲವೇ nodal Agency? ಇವತ್ತು Indian Express ನಲ್ಲಿ ಏನು ಹೇಳುತ್ತಾರೆ.

"As per the frame work agreement between the State Government and the NICE entered in1997 the former was obliged to provide the necessary land to the latter for executing the project which included developing townships along the Bangalore-Mysore express way. KIADB was the agency to acquire lands and transfer these lands to the NICE. Amidst controversy over the project following political developments in the State the KIADB had created a confusion by stating that the land transfer should be done only on lease-cum-sale basis and not on absolute sale deed basis. Meanwhile, the Supreme Court on a petition by NICE ordered that the project should be expediated and it upheld the frame work agreement as late as October 13th 2006. The then Additional Chief Secretary and Principal Secretary, PWD P.B.Mahishi, current Chief Secretary has directed the KIADB to hand over land to the project company NICE. Subsequently, even the KIADB passed a resolution to transfer the lands to NICE Sridhar had transferred the land near Kengeri to NICE. The land is already in the possession of the project company. Sources also disclosed that Government had recommended to the Union Government to take action against two Indian Administrative Service, IAS officers, commerce and Industries Department Principal Secretary Mr. K.M.Shivakumar and KIADB Chief Executive

Officer Mr.D.N.Naik in connection with the land transfer issue".

ಇದನ್ನು ನಾನಲ್ಲ, Indian Express ಹೇಳುತ್ತಿರುವುದು. ನನ್ನ ಮೂಲಭೂತ ಪ್ರಶ್ನೆ ಏನೆಂದರೆ ಇದರಲ್ಲಿ ಯಾರು involve ಆಗಿದ್ದಾರೆ, ಯಾರು involve ಆಗಿಲ್ಲವೆಂದು ಅರ್ಥವಾಗುತ್ತಿಲ್ಲ. ನಾನು ಮಾನ್ಯ ಸುಬ್ರಹ್ಮಣ್ಯ ನಾಯ್ಡುರವರಿಗೆ ಕೇಳುವುದು ಒಂದೇ ಒಂದು ಪ್ರಶ್ನೆ. ಇಲ್ಲಿ ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಬೇಕಾದಷ್ಟು ಚರ್ಚೆಯಾದ ಮೇಲೆ ಸರ್ಕಾರ ಬದಲಾಗಿದೆ. ತಾವೂ ಕೂಡ ಇವತ್ತು Industries Minister ಆಗಿ ಬಂದಿದ್ದೀರಿ. ತಮಗೆ ಗೊತ್ತಿದೆ. ಇದು alignment ಆಗಬೇಕಾಗಿತ್ತು. ಇದು ದೊಡ್ಡ ಗಲಾಟೆ ಇರುವಂತಹ ಕ್ಷೇತ್ರ, ಇವನಿಗೆ ನಾವು ಎಲ್ಲಾದರೂ fix ಮಾಡಬೇಕು Affidavit filed before High Court ಹೇಳುತ್ತಿದ್ದೇನೆ.

"The appellant has never sought any fresh clearance from the respondent for such changed clearance, alignment. Synopsis of events leading to withdrawal of CFE granted to the appellant. It is humbly submitted that lands required for change in the alignment of peripheral road has never been brought in subject matter of the IA report and do hence not come with in the purview of the CFE clearance granted on 11.08.2000".

ದಿ: 11.08.2000 ಆದಮೇಲೆ ಇದುವರೆಗೆ Pollution Control Board ಮುಂದೆ ಹೋಗಲಿಲ್ಲ. ದಿ: 15.05.97 ರಲ್ಲಿ Mr.C.R.Ramesh ರವರು ಬರೆದಿದ್ದಾರೆ.

"The alignments of the express way and the location of the townships have been finalized and the appropriate land along with the Sy.Nos. are identified and have been approved by Government of Karnataka."

1997ರಲ್ಲಿ Secretary, PWD who was the nodal agency on that day ಬರೆದಿರುವುದು. ಅವತ್ತು ನೀವು alignment final ಮಾಡಿದಿರಿ ಎಂದರೆ ಇವತ್ತು ಆ alignment ಎಲ್ಲಿ ಹೋಯಿತು? ನೀವು ಅದಕ್ಕೆ ಏಕೆ clearance ಕೊಡುತ್ತಿಲ್ಲ? ಅದನ್ನು PCB clear ಮಾಡಿದ್ದೇವೆಂದು ಹೇಳುತ್ತಾರೆ, ನೀವು ಏಕೆ project ಮಾಡುವುದಕ್ಕೆ ಬಿಡುತ್ತಿಲ್ಲ? ನೀವು ನಮ್ಮನ್ನು ಏಕೆ ಮಧ್ಯದಲ್ಲಿ ತಂದು ಸಿಕ್ಕಿಸಿ ನರಳಿಸುತ್ತಿದ್ದೀರಿ? ಅದನ್ನು ಹೇಳಬೇಕಲ್ಲವೇ? ನೀವೇ 1997ರಲ್ಲಿ alignment ಆಗಿದೆ ಎಂದು ಹೇಳಿದ್ದೀರಲ್ಲ? ಸರ್, ನಿಮಗೆ ಒಂದು important ಮಾಹಿತಿ ಹೇಳುತ್ತೇನೆ, ಈ NOC ಕೊಟ್ಟಿರುವುದರಲ್ಲಿ major beneficiary is Mr. Ramesh's son. NICE company ಗಾಗಿ acquire ಮಾಡಿದ ಜಮೀನನ್ನು ಅವನು ತೆಗೆದುಕೊಂಡಿದ್ದಾನೆ. ಇವರು acquire ಮಾಡಿದ್ದು ಹಾಗೂ ಅವರ ಹತ್ತಿರ ಇದ್ದಂತಹ ಜಮೀನನ್ನು ತೆಗೆದುಕೊಂಡು ಎರಡು ಲಕ್ಷ ರೂಪಾಯಿಗೆ register ಮಾಡಿಸಿಕೊಂಡು 5 ಲಕ್ಷ ರೂಪಾಯಿ compensation ಅನ್ನು ಆತ ತೆಗೆದುಕೊಳ್ಳುತ್ತಿದ್ದಾನೆ. Captain Ramesh, P.W.D. Secretary ಇದ್ದಾರಲ್ಲಾ, his son NOC ತೆಗೆದುಕೊಂಡು acquired land ಅನ್ನು ಅವನ ಹೆಸರಿಗೆ register ಮಾಡಿಕೊಂಡು ಆಮೇಲೆ ಅದನ್ನು ಮತ್ತೆ acquisition ಆದ ಹಾಗೆ ತೋರಿಸಿ, ಆ ಎರಡು ಕ್ರಯಪತ್ರಗಳು ನನ್ನ ಹತ್ತಿರ ಇದೆ. ಅವನು 2 ಲಕ್ಷಕ್ಕೆ ಬರೆಸಿಕೊಂಡು 5 ಲಕ್ಷ ರೂಪಾಯಿಗಳು compensation ತೆಗೆದುಕೊಂಡಿರುವಂಥಾದ್ದು, ಇವತ್ತು ನಮ್ಮ ಮುಂದೆ ಇದೆ. 3 ಲಕ್ಷ ರೂಪಾಯಿಗಳು ಇರುವಂಥಾದ್ದು record ಮೇಲೆ un-official ಆಗಿ ಎಷ್ಟು ನಡೆದಿದೆ? ಇದು ಏನಾಗುತ್ತಿದೆಯೆಂಬುದು ನಮಗೆ ಗೊತ್ತಾಗುತ್ತಿಲ್ಲ. ದಯಮಾಡಿ ಈ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು. ಇನ್ನೊಂದು ವಿಚಾರವೇನೆಂದರೆ, 1997ರಲ್ಲಿ alignment fix ಆಯಿತು. 2001 May 14, Notification of new survey numbers for BMICP. We bring to your kind notice that detailed joint measurement ಆಯಿತು. Additional area at Link Road, interchange due to proposed deletions of developed areas, Veerabhadra Nagar Colony, additional area at Konnappanagara village to protect tank for construction of ramp to avoid 400 national grid at Basavapura village, to avoid tank at

Belur village, ಇವನಿಗೆ ಯಾರು ಅಧಿಕಾರವನ್ನು ಕೊಟ್ಟವರು?" 1997ರಲ್ಲಿ alignment ಆಗಿ 2001ಗೆ ಅವನು ಕೇಳಿದ ಎಂದು, Madanayakanahalliನಲ್ಲಿ, Thotaguddanahalli ನಲ್ಲಿ, 15,16 Pantarapalyaದಲ್ಲಿ, Hosakerehalliಯಲ್ಲಿ, ಎಲ್ಲಾ ಕಡೆಗಳಲ್ಲಿ ಮತ್ತೆ ಜಮೀನುಗಳನ್ನು ಕೊಟ್ಟಿದ್ದಾರೆ. ಅವನು ನಿನ್ನೆ, ಮೊನ್ನೆ ಹೇಳಿಕೊಂಡು ತಿರುಗಾಡುತ್ತಿರುವುದೇನೆಂದರೆ ನಾನು ಏನು ಮಾಡಲಿ, ಅವರು ಜಮೀನು ಕೊಂಡುಕೊಂಡಿದ್ದಾರೆ. ಅದಕ್ಕೂ ನನಗೂ ಸಂಬಂಧವಿಲ್ಲವೆಂದು ಹೇಳುತ್ತಿದ್ದಾನೆ. ಈಗ ನಮಗೆ ಯಾವ ಜಮೀನನ್ನು ಬಿಡಿಸುತ್ತೀರಿ? ನೀವು ನಮಗೆ ಹೇಳಬೇಕಲ್ಲಾ? ನೀವು ಯಾವ ಜಮೀನನ್ನು ಬಿಡಿಸಬೇಕಾಗಿತ್ತೋ, ಆ ಜಮೀನಿಗೆ NOC ಕೊಟ್ಟು ಅವರಿಗೆ ಬೇಕಾದವರಿಗೆ sale ಮಾಡಿಸಿದ್ದೀರಿ. ಯಾವ ಜಮೀನಿಗೆ commercial value ಬರುತ್ತಿತ್ತೋ, ಆ ಜಮೀನನ್ನು ಶಾಮೀಲಾಗಿ ಅವನಗೆ ಕೊಡುತ್ತಿದ್ದೀರಿ. ಯಾವ ಜಮೀನನ್ನು, ಈ ಸದನದ ಮುಂದೆ ನಂತುಕೊಂಡು ಹೇಳಿದ್ದೀರಿ, Re-convey ಮಾಡುವುದಕ್ಕೆ ಬರುವುದಿಲ್ಲ, ರೈತರಿಗೆ ಕೊಡುವುದಕ್ಕೆ ಬರುವುದಿಲ್ಲ, Under Section 28 acquire ಆಗಿರುವಂಥಾದ್ದನ್ನು ಅದನ್ನು indirect ಆಗಿ ಯಾರಿಗೋ ಮಾರಿಸುತ್ತಿದ್ದೀರಿ. ಇದು ಒಂದು ಸರ್ಕಾರನಾ? ನೀವು ಮಾರವಾಡಿಗಳಾ? Sorry, ಆ ಜನಾಂಗಕ್ಕೆ ಕೆಟ್ಟ ಹೆಸರನ್ನು ತರುವುದಕ್ಕೆ ಆಗುವುದಿಲ್ಲ. ನೀವು ದಳ್ಳಾಳರಾ? ಏನು ಮಾಡಿದ್ದೀರಿ ಎಂಬುದನ್ನು ಹೇಳಬೇಕು. Sir, I will give you the list. ಇವರ Notification date, applications ಅನ್ನು ಯಾರು clear ಮಾಡುವುದು? ಅವನು ಯಾರೋ, Sridhar ಎನ್ನುವವನನ್ನು ಇಟ್ಟುಕೊಂಡು ಎಲ್ಲಕ್ಕೂ ಸಹಿ ಹಾಕಿಸಿ, register ಮಾಡಿಬಿಟ್ಟು entire property belongings to Bangalore ಈ ರೀತಿಯಾಗಿ ಆಗಿದೆ, ನಾನು ಇದು ಒಂದು gist ಅನ್ನು ಹೇಳಿದ್ದೇನೆ. ತಾವು ನನಗೆ ಮಾತನಾಡುವುದಕ್ಕೆ time ಕೊಡಲಿಲ್ಲ. ನಾನು ಈ ಪ್ರಕರಣವನ್ನು NICE ಅಲ್ಲದೇ ಹೊರಗಿನವರು ಮಾಡಿರುವಂಥ ಪ್ರಕರಣದ ಮಾಹಿತಿಯನ್ನು ತಮಗೆ ಕೊಡುತ್ತೇನೆ. ಇವರು ಏನು ಮಾಡುತ್ತಾರೆಂದರೆ, lease-cum-sale ಎಂದು ಒಂದು industrial shed, industrial site ಅನ್ನು ನಾವು allot ಮಾಡುವುದು. ಒಂದೆರಡು ವರ್ಷಗಳು, 3 ವರ್ಷ, 4 ವರ್ಷಗಳ agreement ಅನ್ನು ನಾವು ಮಾಡುತ್ತೇವೆ. 2 years ಒಳಗೆ ನೀವು activity ಅನ್ನು ಶುರು ಮಾಡಬೇಕು, ಇಷ್ಟು ಹುಡುಗರಿಗೆ

ಕೆಲಸ ಕೊಡಬೇಕು, ಇಷ್ಟು ಜನ ಕನ್ನಡಿಗರು ಇರಬೇಕೆಂದು ಮಾಡುವುದು. ಎಲ್ಲೋ ಒಂದು shed ಅನ್ನು ಹಾಕುವುದು, 10 ಹುಡುಗರನ್ನು ಕೆಲಸಕ್ಕೆ ಸೇರಿಸಿಕೊಂಡ ಹಾಗೆ ಸೇರಿಸಿಕೊಳ್ಳುವುದು, ಆಮೇಲೆ permanent sale deedಗೆ apply ಮಾಡುವುದು. ಅವನು ಒಂದು ಸಲ permanent sale deed ತೆಗೆದುಕೊಂಡ ತಕ್ಷಣ entire structure ಅನ್ನು remove ಮಾಡುವುದು. Housing complex ಮಾಡುವುದು, builders ಆಗಿ ಬಿಟ್ಟಿದ್ದಾರೆ. ಇವತ್ತು ಈ ಬಗ್ಗೆ ಒಂದು ತನಿಖೆಯಾಗಬೇಕು. ಅಂಥಾ ಎಷ್ಟು ಪ್ರಕರಣಗಳು KIADBಯಲ್ಲಿ ಇವೆ? ಇದಕ್ಕೆ KIADB ಯವರು ಏನು ಮಾಡುತ್ತಾರೆ? ಕೈ ಎತ್ತುತ್ತಾರೆ. sale deed ಆದಮೇಲೆ, "we cannot do any thing". ನಾವು ಮೊದಲೇ 1995ನಲ್ಲಿ Government permission ತೆಗೆದುಕೊಂಡು, change of activity ಆಗಬೇಕಾಗಿತ್ತು. ಈಗ ಇಲ್ಲ, ಅದು BDAಗೆ ಸೇರಿದ್ದರೆ, BDA, corporationಗೆ ಸೇರಿದ್ದರೆ corporation, BMRDA area ಆಗಿದ್ದರೆ ಅಲ್ಲಿಗೆ ಹೋಗಿ ಒಂದು ಅರ್ಜಿಯನ್ನು ಕೊಡುವುದು. ನನ್ನದು 40 ಎಕರೆ, 50 ಎಕರೆ ಜಮೀನು ಇದೆ. ಇಲ್ಲಿ ಒಂದು housing complex ಅನ್ನು ಕಟ್ಟುವುದಕ್ಕೆ ನನಗೆ permission ಎಂದು ಕೇಳಿದರೆ, they will give, Colleges. ಇವರು ಬೆಂಗಳೂರಿನಲ್ಲಿ industrial area ಎಂದು ತೆಗೆದುಕೊಂಡು College ಗಳನ್ನು ಕಟ್ಟಿಕೊಂಡು, hotel ಗಳನ್ನು ಕಟ್ಟಿಕೊಂಡು, housing complex ಕಟ್ಟಿಕೊಂಡು, community hall ಕಟ್ಟಿಕೊಂಡು, entire KIADB Actಗೆ ನೀವು amendment ತಂದು, when once sale deed is made, there the business between himself and KIADB ends ಎಂದು ಹೇಳಿ, ಅದು ಅವನ ಸ್ವಂತ property ಎಂದು ಮಾಡಿ, ಇಡೀ ಬೆಂಗಳೂರನ್ನು ಇವತ್ತು Industrial Area Development Act ಕೆಳಗಡೆ acquire ಮಾಡಿ, ಯಾರ್ಯಾರಿಗೆ ಎಷ್ಟೆಷ್ಟು ಬೇಕೋ, ಜಮೀನುಗಳನ್ನು ಕೊಟ್ಟು ಬಂದರೆ, ಬೆಂಗಳೂರಿನ ಗತಿ ನಾಳೆ ಏನು? ಈ ರಾಜ್ಯದ ಗತಿ ನಾಳೆ ಏನು? ಇದೆಲ್ಲವನ್ನು ಯಾರು ಮಾಡುತ್ತಿದ್ದಾರೆ? ಏಕೆ ಮಾಡುತ್ತಿದ್ದಾರೆ? ಗೊತ್ತಿಲ್ಲ. ಅದು ಯಾರಿಗೆ ಸುಮ್ಮನೆ ಒಂದು charities ಎಂದು ಮಾಡುತ್ತಿದ್ದೀರಾ? ನಾನು ಅವತ್ತು ಹೇಳಿದೆ. ISKCON charities ಎಂದು ಒಂದು ಅರ್ಜಿಯನ್ನು ಹಾಕಿದರು, ಎಂದು ಇದಕ್ಕೆ ಎರಡು ಕಡೆ acquire ಮಾಡಿಕೊಳ್ಳುವುದಕ್ಕೆ ಹೊರಟ್ಟಿದ್ದಾರೆ. ಇವರು

ಏನು ಮಾಡುತ್ತಾರೆಂಬುದನ್ನು ಕೇಳುವುದಿಲ್ಲ. What is your background ಎಂದು ನೀವು ಕೇಳುವುದಿಲ್ಲ. ಒಂದು ಗುಡ್ಡವನ್ನು ಕೊಟ್ಟಿದ್ದಾರೆ, which was supposed to be a mining area, mining lease ಇದ್ದ ಜಾಗ KIADB ಯವರು ಇವತ್ತು ಅವರಿಗೆ park ಅನ್ನು ಮಾಡುವುದಕ್ಕೆ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಅಧ್ಯಕ್ಷರೆ, ತಾವು ಒಂದು ತನಿಖೆಗೆ ಆದೇಶ ಮಾಡಬೇಕು. ಇದಕ್ಕೆ ಇನ್ನೊಂದು House Committee ಆಗಬೇಕು, ಏಕೆಂದರೆ, ನಾವು ನೊಂದು ಹೇಳುತ್ತೇವೆ. ಈ KIADB ಒಳಗೆ ಹೋಗಿ ನಾವು ತನಿಖೆ ಮಾಡುವುದಕ್ಕೆ ಆಗಲಿಲ್ಲ. ಅದು encroachment ಎಂದು ಅನಿಸಿಕೊಳ್ಳುವುದಿಲ್ಲ, because this is a granted land through KIADB, ಆದರೆ, ಇದು ಎಷ್ಟು ದುರುಪಯೋಗವಾಗಿದೆಯೆಂಬ ಬಗ್ಗೆ ನಾವು dig out ಮಾಡುವುದಕ್ಕೆ ಆಗಿಲ್ಲ. ಸುಮಾರು Peenya ದಿಂದ K.R.Puram ವರೆಗೆ major junk of the land Yeshwanthpuram ನಿಂದ Mahalakshmi Layout, Rajajinagar ನವರೆಗೂ KIADB ಹೆಸರಿನಲ್ಲಿ, industry ಹೆಸರಿನಲ್ಲಿ, cheap ಆಗಿ land ಅನ್ನು ತೆಗೆದುಕೊಂಡು ಇವತ್ತು ಬಹಳ commercial establishments, housing complexes ಬಂದಿದೆ. ನಾನು ತಮಗೆ ಕೇಳುವಂಥಾದ್ದು ಏನೆಂದರೆ, ಈ de-notification stop ಆಗಬೇಕು. ಇದರ ಬಗ್ಗೆ ಸಮಗ್ರವಾದ ಒಂದು ತನಿಖೆಯಾಗಬೇಕು. ಇದಕ್ಕೋಸ್ಕರ ಒಂದು ಸದನದ ಸಮಿತಿಯನ್ನಾದರೂ ಮಾಡಿಸಿ, ಅಥವಾ ಒಬ್ಬ judge ಕಡೆಯಿಂದಲಾದರೂ ಇದೆಲ್ಲಾ ಮಾಡಿಸಿ. ಒಂದು ಸಲ ನಮಗೆ ಅವರಿಂದ ಸತ್ಯವನ್ನು ಹೇಳಿಸಿ ಬಿಡಿ. ನಾವು ಹುಚ್ಚು ಹಿಡಿದವರ ಹಾಗೆ ಇದೇ ವಿಷಯವನ್ನು ಮಾತನಾಡಿ, ನಾನು ಏನು Doctorate ತೆಗೆದುಕೊಳ್ಳಬೇಕಾಗಿಲ್ಲ. Please do some thing. ತಾವು ಏನಾದರೂ ಮಾಡುವುದಕ್ಕೆ ಒಂದು ಆದೇಶವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಈ ವಿಷಯಕ್ಕೆ 40 ನಿಮಿಷಗಳನ್ನು ತೆಗೆದುಕೊಂಡಿದ್ದಾರೆ. ಇನ್ನು 20 ನಿಮಿಷ ಉಳಿದಿದೆ. ಇನ್ನು ಒಬ್ಬರಿಗೆ 15 ನಿಮಿಷಗಳು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ನಾನು ಈ ವಿಷಯಕ್ಕೆ ಒಂದು ಗಂಟೆ ಕಾಲ ನಿಗದಿ ಮಾಡಿದ್ದೇನೆ. ನಾನು ಈಗ ಉಳಿದ

ಕತೆಯನ್ನು ಕೇಳುವುದಕ್ಕೆ ರೆಡಿ ಇಲ್ಲ. ಈಗ ಒಬ್ಬರು 15 ನಿಮಿಷಗಳು ಮಾತನಾಡಬಹುದು, ಆಮೇಲೆ ಮಾನ್ಯ ಮಂತ್ರಿಗಳಿಂದ ಉತ್ತರವಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಅವರು ಹೇಳಿದ್ದನ್ನು ಬಿಟ್ಟು......

ಅಧ್ಯಕ್ಷರು: ದಯಮಾಡಿ ಅವರು ಹೇಳಿದ್ದನ್ನು ಬಿಟ್ಟು ಹೇಳಬೇಕು. There should be no repetition.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು ಸಾರ್, ಮೊದಲನೆಯದಾಗಿ Board meeting ನಲ್ಲಿ ಏನು ತೀರ್ಮಾನ ಮಾಡಿದ್ದೀರಿ, sale deed ಅನ್ನು ಮಾಡಿಕೊಡಿಯೆಂದು, ಇದು ಆಗಿರುವಂಥಾದ್ದು ದಿ:13/10/2006 ನಲ್ಲಿ. Board meeting presided by P.B.Mahishi, I.A.S.Additional Chief Secretary,and principal secretary to Government, Public Works Department, ಇವರ ಅಧ್ಯಕ್ಷತೆಯಲ್ಲಿ, 2003ನಲ್ಲೂ ಇದೆ, ದಿ:13/10/06 ನಲ್ಲೂ ಇದೆ. ಇದನ್ನು sale deed ಮಾಡಿಕೊಡಿಯೆಂದು ತೀರ್ಮಾನ ಮಾಡಿರುವವರು. ಇವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂಬ ಬಗ್ಗೆ ಸರ್ಕಾರ ಉತ್ತರವನ್ನು ಹೇಳಬೇಕು. ನಾನು detail ಆಗಿ ವಿವರಕ್ಕೆ ಹೋಗುವುದಿಲ್ಲ, ಇಲ್ಲಿ Sridhar ಗೆ ಮಾಡಿದ್ದೀರಿ, ಅದರ ಬಗ್ಗೆ ನಮ್ಮದು ಏನೂ ತಕರಾರು ಇಲ್ಲ. ಇವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? The Board which has...

SRI. K.R.RAMESH KUMAR: This is a notice given to the Chair under Rule 60 My learned friend Mr. Madhu Swamy has made elaborate submission. Preliminary submission ಮಾಡುವ ವೇಳೆಗೆ, it is not necessarily the Chair, it is an attempt made to convince the Chair and as well as the House. He read out from the proceedings that sale deeds shall be executed ಎಂದು ಹೇಳುತ್ತಾರೆ. This meeting was held in the presence of no less a person than the Chief Secretary of the State. Mr.Shridhar, who is said to have been now kept under suspension, was only a Secretary, much,

much junior in rank. The meeting proceedings held under the chairmanship of Chief Secretary, an officer of Secretary's rank will have no alternative, but to execute, but to implement. ಈಗ see, the question is "Should the sub-ordinate officer obey the directions of the superior officers or otherwise?" We have to now come to a conclusion that whether there is anything like KCSRs in the state. Karnataka Civil Service Rules ಇದೆಯಾ, ಇಲ್ಲವಾ? ಅವರಿಗೆ. discipline ಇದೆಯಾ, ಇಲ್ಲವಾ? Hierarchy ಇದೆಯಾ. ಇಲ್ಲವಾ, ಎಂದು, ತಮಗೆ ಒಂದು ಸಲ ಸರ್ಕಾರಕ್ಕೆ convince ಆದಮೇಲೆ.....

Mr.SPEAKER: Already the matter has been converted into 69.

SRI K.R.RAMESH KUMAR: Whatever it is Sir, ನಾನು ತಮಗೆ ಏನು ಹೇಳುತ್ತೇನೆಂದರೆ, I am not a signatory. I am only seeking a clarification from the Chair. ಅವರಿಗೆ ಎಲ್ಲರಿಗೂ ಮಾತನಾಡುವುದಕ್ಕೆ ಬಿಟ್ಟು, ಇನ್ನು ಬೇಕಾದಷ್ಟು business ಸಭೆಯ ಮುಂದೆ ಇದ್ದಾಗ, the Chair can direct the Government. I am not coming in the way of the speaking. What I would say is, you can as well permit the Hon'ble Members to contribute theirs views. I have absolutely no objection. What I am appealing to you, ಸರ್ಕಾರದವರು ಅಲ್ಲಿ ಕುಳಿತಿದ್ದಾರೆ, For what object this institute was created? Obviously, the way they have conducted themselves, they have transgressed their limits. Them have gone all around. Therefore, the Chair, in all its wisdom and responsibility, can direct the Government and save the time of the House. I don't come in your way. I am only suggesting a means.

MR.SPEAKER: Let him submit.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲನೆಯದಾಗಿ, ಈ ಸರ್ಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥಾದ್ದನ್ನು ಈ ಸದನಕ್ಕೆ ಸ್ಪಷ್ಟ ಮಾಡಬೇಕು. ಎರಡನೆಯದಾಗಿ, 17-5-2007ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕ ಪ್ರದೇಶಾಬಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಒಂದು ಲೆಟರ್ ಬರೆಯುತ್ತಾರೆ. ಏನೆಂದು ಬರೆಯುತ್ತಾರೆಂದರೆ, ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿ, ವೀರಸಂದ್ರ ಗ್ರಾಮದ ಸರ್ವೆ ನಂಬರ್ 4 ರಿಂದ 14ರ ವರೆಗೂ 16 ರಲ್ಲಿರತಕ್ಕಂಥ ಜಮೀನನ್ನು ಭೂಸ್ವಾಧೀನದಿಂದ ಹೊರತು ಪಡಿಸುವ ಬಗ್ಗೆ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಪ್ರಿನ್ಸಿಪಲ್ ಸೆಕ್ರೆಟರಿ ಲೆಟರ್ ಬರೆಯುತ್ತಾರೆ. Principle Secretary has written a letter to Executive officer. ಅದರಲ್ಲಿ ಏನು ಬರೆಯುತ್ತಾರೆಂದರೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಗಮನವನ್ನು ಸೆಳೆಯಲಾಗಿದೆ. ಈ ಅಂಶಾವಾರು ಮಾಹಿತಿಯನ್ನು ಜರೂರಾಗಿ ಕಳುಹಿಸಿಕೊಡುವಂತೆ ನಿಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ಬರೆದಿದ್ದಾರೆ. ಮಾಹಿತಿಯನ್ನು ಅರ್ಜೆಂಟಾಗಿ ಕಳುಹಿಸಬೇಕಂತೆ. ಏನು ಅರ್ಜೆಂಟೋ ಗೊತ್ತಿಲ್ಲ. 17-5-2007ರಲ್ಲಿ Principle Secretary, Commerce and industries Department ಯಾರಿದ್ದರೋ ಅವರು ಬರೆದಿರತಕ್ಕಂಥ ಲೆಟರ್ ಇದು. ಏನು ಅಂಥ ಅರ್ಜೆಂಟ್ ಇದ್ದದ್ದು? ಏಕೆ ಇದನ್ನು ಡಿಲೀಟ್ ಮಾಡಬೇಕು? ಏಕೆ ನೀವು acquire ಮಾಡಿದಿರಿ? Government has to answer this. ನಂತರ, 19-5-2007ರಲ್ಲಿ again the same Secretary has written a letter to the Chief Executive officer. Proposal for acquisition of land for industrial purpose under Sec. 28(4) of K.I.A.D.B.Act. Dropping acquisition of land under Sec. 4 of K.I.A.D.B. act in Ilavala and Maidanahalli village of Mysore Taluk. ಇದನ್ನು ಯಾರಿಗೆ ಕೊಡಬೇಕೆಂದು ಇವರು ಡ್ರಾಪ್ ಮಾಡಿದ್ದಾರೆ ಗೊತ್ತೇ? ಯಾವ ಸೊಸೈಟಿಗೆ ಇವರು ಕೊಡಬೇಕೆಂದು ಹೇಳಿದ್ದರೋ, the Credential of the Socity is very

bad and criminal record is there. This area should be developed by Karnataka Telecom Depertment Employees' Co-operative Society Limited, as a residential layout within the industrial area. ಇದು ಹೇಗಿದೆ ನೋಡಿ, " to develop a residential area within the industrial area" ಎಂದು ಇದೆ. ಈ ಸೊಸೈಟಿ ಯಾವುದು ಗೊತ್ತೇ? This society is having very bad record. 90 acres of land is to be given to a society which is having very bad credentials and criminal record. ಆ ಸೊಸೈಟಿಗೆ ಕೊಡಬೇಕು ಎಂದು Principle Secretary ಯವರು ಲೆಟರ್ ಬರೆಯುತ್ತಾರೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು. ಇದನ್ನು ನಾನು ಇಲ್ಲಿಗೇ ಬಿಡುತ್ತೇನೆ. 14 ಜೂನ್‌ನ ಕರ್ನಾಟಕ ರಾಜ್ಯ ಪತ್ರದಲ್ಲಿ 28(12) ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ಇಂತಿಂಥ ಸರ್ವೆ ನಂಬರುಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ acquisition ಅನ್ನು ಮಾಡುತ್ತಾರೆ. ಸಮಯವಿಲ್ಲದಿರುವುದರಂದ ನಾನು ಈಗ ಆ ಎಲ್ಲ ವಿವರಗಳಿಗೆ ಹೋಗುವುದಿಲ್ಲ. ಇದರಲ್ಲಿ NOC ಕೊಟ್ಟಿರುವುದು ಯಾರಿಗೆ ಗೊತ್ತೇ? ಇವರು ಯಾರು ಎಂದು ಸರ್ಕಾರ ಇವತ್ತು ಸದನಕ್ಕೆ ಹೇಳಬೇಕು. ಇವರು NOC ಯಾರಿಗೆ ಕೊಟ್ಟಿದ್ದಾರೆ ಎಂದರೆ, ಒಬ್ಬ ವ್ಯಕ್ತಿಗೆ ಎಷ್ಟು ಕೊಟ್ಟಿದ್ದಾರೆ ಎಂದು ನೋಡಿ, ಬಿ.ಆರ್.ರಾಜೀವ್ ಬಿನ್ ಸಿ.ಆರ್.ರಮೇಶ್, ಇದು ಒಂದು ಕಡೆ. ಎರಡನೆಯ ಕಡೆ, ಬಿ.ಆರ್.ರಾಜೀವ್ ಬಿನ್ ಸಿ.ಆರ್.ರಮೇಶ್. ಮೂರನೆಯದು, ಬಿ.ಆರ್.ರಾಜೀವ್ ಬಿನ್ ಸಿ.ಆರ್.ರಮೇಶ್. ಇವರು ಯಾರು ಎಂದು ಈ ಸದನಕ್ಕೆ ಹೇಳಬೇಕು. ಇವರಿಗೆ ಕೇವಲ ಮೂರು ಕಡೆಗಳಲ್ಲಿ ಮಾತ್ರ ಕೊಟ್ಟಿಲ್ಲ, ಇನ್ನೂ ಇದೆ. Lot of cases ಇದೆ. ಇದು ಒಂದು ಸರ್ವೆ ನಂಬರಿನಲ್ಲಿ ಕೊಟ್ಟಿರುವುದು. ಒಬ್ಬನೇ ಮನುಷ್ಯನಿಗೆ ಎಷ್ಟು ಕೊಟ್ಟಿದ್ದಾರೆ ಎಂದರೆ, ಒಂದು ಕಡೆ ಖುಷ್ಕಿ ಜಮೀನು 38 ಗುಂಟೆ, ಇನ್ನೊಂದು ಕಡೆ 2 ಎಕರೆ 26 ಗುಂಟೆ, ಮತ್ತೊಂದು ಕಡೆ 3 ಎಕರೆ 22 ಗುಂಟೆ ಕೊಟ್ಟಿದ್ದಾರೆ. ಇನ್ನೊಬ್ಬ ಮನುಷ್ಯ, B.C.Shivakumar S/o Channaveerappa ಇವರಿಗೆ ನಾಲ್ಕು ಕಡೆ ಕೊಟ್ಟಿದ್ದಾರೆ. ಅವರಿಗೆ ಎಷ್ಟು ಜಮೀನನ್ನು ಕೊಟ್ಟಿದ್ದಾರೆ ಎಂದರೆ, 1 ಎಕರೆ 34 ಗುಂಟೆ, 16 ಗುಂಟೆ, 34 ಗುಂಟೆ, 17 ಗುಂಟೆ ಇಷ್ಟು ಜಮೀನನ್ನು ಒಬ್ಬರಿಗೇ ಕೊಟ್ಟಿದ್ದಾರೆ. ಇವರು ಯಾರು ಎಂದು

ಹೇಳಬೇಕು. ಅದೇ ರೀತಿ, ಪುಷ್ಪಲತ ಯಾರು ಎಂದು ಹೇಳಬೇಕು ಎಂದು ಸರ್ಕಾರವನ್ನು ಕೇಳುತ್ತಿದ್ದೇನೆ. K.I.A.D.B ನವರು ಸಿ.ಆರ್.ರಮೇಶರವರ ಶ್ರೀಮತಿಯಾದ ಎಂ.ಶಕುಂತಲಮ್ಮ ಎನ್ನುವವರಿಗೆ ಒಂದು endorsement ಕೊಟ್ಟಿದ್ದಾರೆ. ಏನು endorsement ಕೊಟ್ಟಿದ್ದಾರೆ:

"ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ತಿಪ್ಪೂರು ಗ್ರಾಮದ ಸರ್ವೆ ನಂಬರ್ 48ರಲ್ಲಿ 1 ಎಕರೆ, 5 ಗುಂಟೆ ಜಮೀನನ್ನು ಮಾರಾಟ ಮಾಡಲು ಅನುಮತಿ ಕೋರಿರುವ ಬಗ್ಗೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ತಿಪ್ಪೂರು ಗ್ರಾಮದ ಸರ್ವೆ ನಂಬರ್ 48 ರಲ್ಲಿ 1 ಎಕರೆ, 5 ಗುಂಟೆ ಜಮೀನು ಉಲ್ಲೇಖ (1)ರಂತೆ ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಪ್ರಾಥಮಿಕ ಅಧಿಸೂಚನೆಗೆ ಒಳಪಟ್ಟಿದ್ದು, ಸದರಿ ಜಮೀನನ್ನು ಶ್ರೀಮತಿ ಎಂ. ಶಕುಂತಲಮ್ಮ ಕೋಂ ಸಿ.ಅರ್.ರಮೇಶ್ ಅವರಿಗೆ ಮಾರಾಟ ಮಾಡಲು ಅನುಮತಿ ಕೋರಿ ಉಲ್ಲೇಖ ಪತ್ರ (3)ರನ್ವಯ ಈ ಕಛೇರಿಗೆ ತಲುಪಿರುವ ಮನವಿ ಹಾಗೂ ಈ ಜಮೀನು ಖರೀದಿದಾರರು ಮತ್ತು ನೀವು ಸರ್ಕಾರಕ್ಕೆ ಬರೆದುಕೊಟ್ಟಿರುವ ಮುಚ್ಚಳಿಕೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ತಿಪ್ಪೂರು ಗ್ರಾಮದ ಸರ್ವೆ ನಂಬರ್ 48 ರಲ್ಲಿ 1 ಎಕರೆ, 5 ಗುಂಟೆ ಜಮೀನನ್ನು ಶ್ರೀಮತಿ ಎಂ. ಶಕುಂತಲಮ್ಮ ಕೋಂ ಸಿ.ಅರ್.ರಮೇಶ್ ಅವರಿಗೆ ಮಾರಾಟ ಮಾಡಲು ಅನುಮತಿ ನೀಡಲಾಗಿದೆ." ಶಕುಂತಲಮ್ಮನಿಗೆ ಜಮೀನು ಯಾವತ್ತು ಬಂತು? ಇವರಿಗೆ ಮಾರಾಟ ಮಾಡಲು ಅನುಮತಿ ಕೊಟ್ಟಿದ್ದಾರೆ. ಅಂದರೆ, ಸಿ.ಅರ್.ರಮೇಶ್‌ರವರ ಮಗನಿಗೆ ಮತ್ತು ಹೆಂಡತಿಗೆ ಎಷ್ಟು ಜಮೀನು ಕೊಡಲು ವ್ಯವಸ್ಥೆ ಮಾಡಿದ್ದೀರಿ ಎನ್ನುವುದನ್ನು ಸರ್ಕಾರ ಹೇಳಬೇಕು. ಈ ಸಿ.ಅರ್.ರಮೇಶ್ ಯಾರೆಂದರೆ ಹಿಂದೆ P.W.D. Secretary ಆಗಿದ್ದರು. B.M.I.C. ವಿಷಯದ ಬಗ್ಗೆ ನಾನು ಮತ್ತು ಮಾಧುಸ್ವಾಮಿಯವರು ಹಿಂದೆ ಇಲ್ಲಿ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಿದ್ದೆವು. ಸರ್ಕಾರದ ಅಧಿಕಾರಿಗಳಾಗಿದ್ದುಕೊಂಡು retire ಆದಮೇಲೆ ಆ ಕಂಪನಿಗಳಿಗೆ Managing Director, Director ಗಳಾಗುತ್ತಾರೆಂದು ಹೇಳಿದ್ದೆವು. ಈ ದಂಧೆಗೆಲ್ಲ

ಇಳಿದಿರತಕ್ಕಂಥವರು ಅವರೇ. ಇದರ ಬಗ್ಗೆ ಸರ್ಕಾರ ಹೇಳಬೇಕು. ನಾನು ಸರ್ಕಾರಕ್ಕೆ ಸ್ಪಷ್ಟವಾಗಿ ಕೇಳುತ್ತಿರತಕ್ಕಂಥಾದ್ದು ಏನೆಂದರೆ, ಇವತ್ತು ಈ ಅಧಿಕಾರಿಗಳಿಗೆ ಎಲ್ಲಾದರೂ ಒಂದು ಕಡೆ ಕಡಿವಾಣವನ್ನು ಹಾಕಬೇಕು. ಅವರು ಸರ್ಕಾರದಲ್ಲಿ ಸೇವೆಯಲ್ಲಿರುತ್ತಾರೆ. ಇದರ ಎಲ್ಲ ಲೂಪ್‌ಹೋಲ್ಸು ಇವರಿಗೆ ಗೊತ್ತಿರುತ್ತದೆ. ಎಲ್ಲೆಲ್ಲಿ ಜಮೀನು ಹೊಡೆಯಬಹುದು, ಎಲ್ಲೆಲ್ಲಿ ಎನು ಮಾಡಬಹುದು, ಏನೇನು ದಂಧೆ ನೆಡೆಸಬಹುದು ಎನ್ನುವುದೆಲ್ಲ ಇವರಿಗೆ ಗೊತ್ತಿರುತ್ತದೆ. ರಿಟೈರ್ ಆದಮೇಲೆ ಇವರೇ ಅ ಕಂಪನಿಗಳಿಗೆ ಹೋಗಿ Director ಗಳಾಗಿ ಸೇರಿಕೊಳ್ಳುತ್ತಾರೆ. K.I.A.D.B. ಯವರಿಗೆ ಈ plan ಗಳನ್ನೆಲ್ಲ ಹೇಳಿಕೊಡುತ್ತಿದ್ದಂತೆ ಇವರೆ. ಹೀಗೆ ಹೀಗೆ ಮಾಡಿ ಎಂದು plan ಹೇಳಿ ಕೊಡುತ್ತಿರುವವರು ಇವರು. ಮಂಜುಳ ಎನ್ನುವವರು ಯಾರು ಎಂದು ಹೇಳಬೇಕು.

ಅಧ್ಯಕ್ಷರು: ಹಿಂದೆ Election Commissioner ಆಗಿದ್ದಂಥ ಟಿ.ಎನ್.ಶೇಷನ್‌ರವರು ಮಂತ್ರಿಗಳಿಗೆ ಎಲ್ಲ ಕಳ್ಳದಾರಿ ತೋರಿಸುವವರು ಬ್ಯೂರೊಕ್ರಾಟ್ಸೇ ಎಂದು ಓಪನ್ ಆಗಿ ಹೇಳಿಬಿಟ್ಟಿದ್ದಾರಲ್ಲ, being a big bureaucrat. ಅದೇನು ಆಶ್ಚರ್ಯ ಇಲ್ಲ ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : NOC ಗಳನ್ನು ಕೊಟ್ಟಿರತಕ್ಕಂಥಾದ್ದು ಬರೀ ಬೆಂಗಳೂರಿಗೆ ಸೀಮಿತವಾಗಿಲ್ಲ. ಮದ್ದೂರು ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ, ಶ್ರೀರಂಗಪಟ್ಟಣದಲ್ಲಿ ಕೊಟ್ಟಿದ್ದಾರೆ. ಇದನ್ನು 2003 ರಲ್ಲಿ ಕೊಟ್ಟಿದ್ದಾರೆ. ಇದು ಬರೀ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ಅಂದರೆ ಇವರು ಬರೀ ಬೆಂಗಳೂರನ್ನು ಮಾತ್ರ ಮಾರಾಟ ಮಾಡುತ್ತಿಲ್ಲ. ಇಡೀ ಕರ್ನಾಟಕ ರಾಜ್ಯವನ್ನು ಮಾರಾಟ ಮಾಡಲಿಕ್ಕೆ ಹೊರಟಿದ್ದಾರೆ. ಈ ಸದನದಲ್ಲಿರುವ ನಾವು ಇದನ್ನು ನೋಡಿಕೊಂಡು ಸುಮ್ಮನಿರಬೇಕೆ? ನಾವು ನೋಡಿಕೊಂಡು ಸುಮ್ಮನಿದ್ದರೆ ಆಚೆ ಕಡೆ ಜನ ನಮ್ಮ ಬಗ್ಗೆ ಏನಂದುಕೊಳ್ಳುತ್ತಾರೆ? ದಯವಿಟ್ಟು ಇದಕ್ಕೆ ಸರ್ಕಾರದವರು ಒಂದು ತನಿಖೆಯವನ್ನು ಮಾಡಲೇಬೇಕು. ಏಕೆಂದರೆ, ಮತ್ತೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದೆಲ್ಲವನ್ನು ಮಾನ್ಯ ಮಾಧುಸ್ವಾಮಿಯವರು ಮತ್ತು ಕೆ. ಜಯಪ್ರಕಾಶ್ ಹೆಗಡೆಯವರು ಹೇಳುತ್ತಾರೆ.

ಶ್ರೀ. ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೆ ತನಿಖೆ ಆದೇಶ ಮಾಡುತ್ತೇವೆಂದು ಹೇಳಿದರೆ ನಾವು ಮಾತನಾಡುವ ಅಗತ್ಯವಿಲ್ಲ. ಇಲ್ಲದಿದ್ದರೆ ಬೇರೆ ವಿಷಯಗಳನ್ನು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಮಾತನಾಡುವ ಅವಶ್ಯಕತೆ ಇರುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಕ್ಷಣ ನೀವು ಸರ್ಕಾರಕ್ಕೆ ಆದೇಶ ಕೊಡಬೇಕು. ಇದನ್ನು enquiry ಮಾಡಲಿಕ್ಕೆ ಒಂದು Enquiry Commission ಅನ್ನು ಮಾಡಬೇಕು, ಇಲ್ಲವೆಂದರೆ ಸದನ ಸಮಿತಿಯನ್ನು ಮಾಡಬೇಕು. ಏನಾದರೊಂದು ಮಾಡಿ ತನಿಖೆ ಆಗಬೇಕು. ಎಲ್ಲೋ ಒಂದು ಕಡೆ ಇದನ್ನು ಮುಕ್ತಾಯ ಮಾಡಬೇಕು. ಇಲ್ಲವೆಂದರೆ, ಇದಕ್ಕೆ ಉಳಿಗಾಲವಿಲ್ಲ. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸರ್, ನನಗೆ ಅವಕಾಶ ಕೊಡಿ. 10 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು : ಇಲ್ಲ ಬೇಡಿ. ಈಗಾಗಲೇ 1 ಗಂಟೆ ಕಳೆದಿದೆ. ನಾನು deviate ಆಗುವುದಿಲ್ಲ. ಏಕೆಂದರೆ, ಇನ್ನೂ ಅನೇಕ ಗಂಭೀರವಾದ ವಿಚಾರಗಳನ್ನು ಈ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದರಲ್ಲಿ ಅನೇಕ ಗಂಭೀರವಾದ 2–3 ವಿಷಯಗಳನ್ನು 10 ನಮಿಷದಲ್ಲಿ ಹೇಳಿ ಮುಗಿಸುತ್ತೇನೆ.

ಅಧ್ಯಕ್ಷರು : ಗಂಭೀರವಾದ ವಿಷಯಗಳನ್ನೆಲ್ಲ ಹೇಳಿದ್ದಾರೆ. ಇನ್ನು ಅದರ ಅಗತ್ಯವಿಲ್ಲ. ನೀವು ಬೇರೆ ಯಾವುದಾದರೂ ವಿಷಯದ ಮೇಲೆ ಮಾತನಾಡುವಿರಂತೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : 10 ನಿಮಿಷದಲ್ಲಿ ಮಾತನಾಡಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ನಾನು ಈ ವಿಷಯಕ್ಕೆ ಒಂದು ಗಂಟೆ ಸಮಯವನ್ನು fix ಮಾಡಿದ್ದೆ, ಈಗಾಗಲೆ 1 ಗಂಟೆ ಸಮಯ ಮುಗಿದಿದೆ. ಇನ್ನು ಮಂತ್ರಿಗಳು

ಉತ್ತರ ಕೊಡಬೇಕು. ಪುನಃ ನಿಮಗೆ ಅವಕಾಶ ಕೊಡುವುದಕ್ಕೆ ಹೇಗಾಗುತ್ತದೆ? ಈಗ ಏನಾಗುತ್ತದೆಂದರೆ, ಎಲ್ಲರೂ ಸಹ ಅದೇ ತರಹ ಹೇಳುತ್ತಾ ಹೋದರೆ ಮತ್ತೆ ಬೇರೆ ಯಾವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಹೇಳಲಿರುವ ವಿಷಯವನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು : 5 ನಿಮಿಷದಲ್ಲಿ ಮಾತನಾಡಿ ಮುಗಿಸುವುದಿದ್ದರೆ ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಆಯಿತು. ಈ ವಿಷಯ ಶ್ರೀಧರ್‌ರವರನ್ನು suspend ಮಾಡಿದಲ್ಲಿಂದ ಪ್ರಾರಂಭವಾಗುತ್ತದೆ. ಶ್ರೀಧರ್‌ರವರನ್ನು suspend ಮಾಡಿರುವುದು supreme Court ನಲ್ಲಿ ಇವರೊಂದು affidavit ಹಾಕಿದ್ದಾರೆ. ಅದನ್ನು ಸರ್ಕಾರ Cover Up ಮಾಡಿಕೊಳ್ಳಲಿಕ್ಕೆ ಎನ್ನುವ ಅನುಮಾನ ಬರುತ್ತಿದೆ. ಇಲ್ಲದಿದ್ದರೆ ಶ್ರೀಧರ್‌ರವರನ್ನು suspend ಮಾಡುವಂಥದ್ದು ಏನಿತ್ತು? ಏಕೆಂದರೆ ಹಿರಿಯ ಅಧಿಕಾರಿಗಳು ಕುಳಿತು ತೀರ್ಮಾನವನ್ನು ತೆಗೆದುಕೊಂಡಿದ್ದನ್ನು ಅದನ್ನು execute ಮಾಡಲಿಕ್ಕೆ ಇರುವಂಥ ಅಧಿಕಾರಿಯನ್ನು suspend ಮಾಡುವಂಥದ್ದಾದರೆ, ಮಾನ್ಯ ಪಿ.ಬಿ.ಮಹಿಷಿಯವರ ಅಧ್ಯಕ್ಷತೆಯಲ್ಲಿ ಆಗಿರುವುದನ್ನು ಅವರು ಹೇಳಿದ್ದಾರೆ.

ಅಧ್ಯಕ್ಷರು : ಹೇಳಿದ್ದಾರಲ್ಲ. Don't repeat. ನಿಮ್ಮ ಹತ್ತಿರ ಬೇರೆ ಏನಾದರೂ ವಿಚಾರ ಇದ್ದರೆ ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ದಿನಾಂಕ: 09-09-2003 ರಲ್ಲಿ ಇನ್ನೊಂದು ಸಭೆ ಆಗಿದೆ. ಆ ಸಭೆ ನೇಗಿಯವರು ಮತ್ತೆ ಸುಬೀರ ಹರಿಸಿಂಗ್‌ರವರ ಅಧ್ಯಕ್ಷತೆಯಲ್ಲಿ ನೆಡೆದಿದೆ. ಅದರಲ್ಲಿ ಏನು ತೀರ್ಮಾನವಾಗಿದೆ? ಆದರೆ, ಲ್ಯೂಕೋಸ್ ವಲ್ಲದುರೈರವರು ಅಲ್ಲಿ ಬೇರೆ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಲ್ಯೂಕೋಸ್ ವಲ್ಲದುರೈರವರು KIADB ಗೆ Executive Director ಆಗಿದ್ದಾಗ, PWD ಗೆ ಒಂದು ಪತ್ರ ಬರೆಯುತ್ತಾರೆ. Outright sale deed ಮಾಡುವುದಕ್ಕೆ ಬರುತ್ತದೆಯೇ ಎನ್ನುವುದರ ಬಗ್ಗೆ 'Therefore, PWD to examine this matter of outright sale deed and issue the letter of clarification or government order within a week

clarifying the views of the government in the matter at the Earliest with all sense of urgency' ಎಂದು ಹೇಳುತ್ತಾರೆ. ಅದರ ನಂತರ ಪುನಃ ತೀರ್ಮಾನವನ್ನು ತೆಗೆದುಕೊಳ್ಳುವುದು. 'The Principal Secretary, PWD in his letter dated 22.9.2003 addressed to principal Secretary, C&I had informed that since it was felt during the meeting on 9.9.2003 that the matter be examined by nodal department, PWD and advise C&I Department to cause the expeditious tranaer of title and documentation to NICEL either on sale basis or lease-cum-sale basis' ಎಂದು ಮಾಡುತ್ತಾರೆ. ಆದರೆ ಪುನಃ ಇವರು Sale deed ಅನ್ನು execute ಮಾಡುತ್ತಾರೆ. ಏಕೆಂದರೆ ಒಂದು ಪಿ.ಬಿ.ಮಹಿಷಿಯವರು ಅಧ್ಯಕ್ಷತೆಯಲ್ಲಿ ಅದೆಂಥದ್ದು. ಇನ್ನೊಂದು ಸುಬೀರ್ ಹರಿಸಿಂಗ್ ಮತ್ತು ಕೆ.ಎಲ್.ನೇಗಿಯವರು ಇದ್ದಂಥ ಸಭೆಯಲ್ಲಿ ಆಗಿರುವಂಥದ್ದು. ಅಲ್ಲಿ ಈ NOC ಬಗ್ಗೆ ಹೇಳಿದ್ದರು. ಅಲ್ಲಿ ಆದೇಶ ಏನು ಮಾಡುತ್ತಾರೆಂದರೆ, Bangalore-Mysore Infrastructure Corridor ಯೋಜನೆ 2ನೇ ಹಂತ ಮತ್ತು 3ನೇ ಹಂತದ ಭೂಸ್ವಾಧೀನದಲ್ಲಿರುವ ರೈತರುಗಳಿಗೆ ಆಕ್ಷೇಪಣಾ ರಹಿತ ಪತ್ರ ನೀಡುವ ಬಗ್ಗೆ ಅದರಲ್ಲಿ Under Secretary ಯವರು ಒಂದು ಪತ್ರ ಬರೆದಿದ್ದಾರೆ. "ಸಂಬಂಧಪಟ್ಟ ರೈತರುಗಳಿಗೆ ಆಕ್ಷೇಪಣಾ ಪತ್ರಗಳನ್ನು ನೀಡುವಾಗ ಈ ಮಾದರಿಯನ್ನು ಅನುಸರಿಸಬೇಕೆಂದು ಕೋರಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ". ಈ ಮಾದರಿಯಲ್ಲಿಯೇ NOC ಅನ್ನು ಕೊಡಿ ಎಂದು ಮಾದರಿಯನ್ನು ಕೊಡುತ್ತಾರೆ. ಆದರೆ, ಈ CEO, KIADB ಪುನಃ ಅವರ letter ನಲ್ಲಿ 6–10–2003 ರಲ್ಲಿ principal Secretary, Commerce Department ನವರಿಗೆ ಇದನ್ನು ಬರೆಯುತ್ತಾರೆ. ಪುನಃ ಅವರಿಗೆ ಉತ್ತರವನ್ನು ಬರೆಯುವಂಥದ್ದು Absolute Sale Deed ಅನ್ನು execute ಮಾಡಿ ಎಂದು. See, ನಿಮ್ಮ ಮುಖ್ಯ ಕಾರ್ಯದರ್ಶಿಯವರು, Principal Secretary, ಯವರೆಲ್ಲ ಕುಳಿತು ಮಾಡಿದಂಥ ತೀರ್ಮಾನದಲ್ಲಿ ಈಗ ಹೊಸದಾಗಿ ಬಂದಂಥ ಅಧಿಕಾರಿಗಳಿಗೆ notice ಅನ್ನು issue ಮಾಡುವಂಥದ್ದು, ಅದರೊಟ್ಟಿಗೆ ಅಲ್ಲಿ ಶ್ರೀಧರ್‌ರವರಿಗೆ Notice ಅನ್ನು ಕೊಟ್ಟಿರುವ ಉದ್ದೇಶ ಏನು ಕಾಣುತ್ತಿದೆಯೆಂದರೆ, ಈ ಅಧಿಕಾರಿಗಳು ಮಾಡಿದ ತಪ್ಪಿನಿಂದಾಗಿ

ಸರ್ಕಾರ ತಪ್ಪು ಮಾಡಿದೆ ಎಂದು ಅಲ್ಲ. ಸರ್ಕಾರವೇ ಇಷ್ಟು ತೀರ್ಮಾನಗಳನ್ನು ತೆಗೆದುಕೊಡದ್ದು ಬಿಟ್ಟರೆ ಯಾವ ಅಧಿಕಾರಿಯೂ ಅಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದು ಅಲ್ಲ. ಅದಕ್ಕೋಸ್ಕರ ನಾನು ತಮ್ಮ ಮುಖೇನ ಮೊನ್ನೆಯ ದಿವಸ KIADB ಬಗ್ಗೆ ತನಿಖೆಯಾಗಬೇಕೆಂದು ಸರ್ಕಾರಕ್ಕೆ ಹೇಳಿದ್ದೆ. ನಾನು ಬಜೆಟ್ ಮೇಲೆ ಚರ್ಚೆ ಮಾಡುವಾಗಲೂ ಹೇಳಿದ್ದೆ. ನಾನು ಅನೇಕ ವಿಷಯಗಳನ್ನು ಹೇಳಲಿಕ್ಕೆ ಇದೆ. ಸರ್ಕಾರ ತನಿಖೆಗೆ ಆದೇಶ ಮಾಡುವುದಾದರೆ ಇನ್ನು ಅದರ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ. ನೀವು ನೇರವಾಗಿ ಹೇಳಿದಿರಿ. Real estate business ನಡೆಯುತ್ತಿದೆ ಎಂದು ತಾವೇ ಹೇಳಿದ್ದಿರಿ. Real estate business KIADB ಹೆಸರಿನಲ್ಲಿ ನಡೆಯುತ್ತಿದೆ. ಅವರು ಅದಕ್ಕೆ ತನಿಖೆ ಮಾಡಲಿಕ್ಕೆ ಆದೇಶ ಮಾಡಲಿ. ಉಳಿದ ವಿಷಯಗಳನ್ನು ನಾವು ಚರ್ಚೆ ಮಾಡುವಂಥ ಅವಶ್ಯಕತೆ ಬರುವುದಿಲ್ಲ. ಒಂದು ವೇಳೆ ನಾವು ಮಾಡಿದ್ದೇ ಸರಿ ಎನ್ನುವ ತೀರ್ಮಾನಕ್ಕೆ ಸರ್ಕಾರ ಬರುವುದಾದರೆ ನಮಗೆ ಹೆಚ್ಚು ಅವಕಾಶವನ್ನು ಕೊಡಬೇಕಾಗುತ್ತದೆ, ನಾವು ಚರ್ಚೆಯನ್ನು ಮಾಡಬೇಕಾಗುತ್ತದೆ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, KIADB ಯಲ್ಲಿ ಅಧಿಕಾರಿಗಳು ಯಾವ ತರಹ ಲೂಟಿ ಮಾಡಿದ್ದಾರೆಂದು Documents ಸಮೇತ ತಮ್ಮ ಮುಂದೆ ಹೇಳಿದ್ದಾರೆ. Documents ಇದೆ. ಅವಾಗ ಯಾರು PWD Secretary ಆಗಿದ್ದರು, ಅವರ ಹೆಂಡತಿ, ಅವರ ಮಕ್ಕಳು ಯಾರ್‍ಯಾರ ಹೆಸರಿನಲ್ಲಿ ಜಾಗ allot ಆಗಿದೆ ಎಂದು ಹೇಳಿದ್ದಾರೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸುಮಾರು 12–14 ವರ್ಷಗಳಿಗಿಂತ ಮೊದಲು ಯಾರು PWD Secretary ಆಗಿದ್ದರು? ಅಲ್ಲಿಂದ ಯಾರ್‍ಯಾರು ಅಧಿಕಾರಿಗಳಾಗಿದ್ದರು, ಅವರ ಮೇಲೆ ತನಿಖೆಯಾಗಬೇಕು. ಒಬ್ಬ PWD Secretary Chief Secretary ಆಗಿ ಯಾವುದೇ ಒಂದು ಪಕ್ಷಕ್ಕೆ ಹೋಗಿ ಖಾದಿ ಬಟ್ಟೆ ಹಾಕಿಕೊಂಡು MLA ಗೆ Contest ಮಾಡುತ್ತಾರೆ. ಈ ತರಹ ಅಧಿಕಾರಿಗಳೆಲ್ಲ KIADB Land ಅನ್ನು ಲೂಟಿ ಮಾಡಿ ಸುಮಾರು 10–12 ವರ್ಷಗಳಿಂದ Hotel industry, Nursing collegeಗಳು, International schools ಎಂದು ಹೇಳಿಕೊಂಡು ಲೂಟಿ ಮಾಡಿದ್ದಾರೆ. ತಾವು ಸರ್ಕಾರಕ್ಕೆ ಆದೇಶ ಕೊಡಬೇಕು. ಇದು ಆದರೆ CBI enquiry ಮಾಡಿ, ಇಲ್ಲದಿದ್ದರೆ ಸದನ ಸಮಿತಿ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ಮಾನ್ಯ ಬಾರಿ ಮತ್ತು ಮಧ್ಯಮ ಕೈಗಾರಿಕ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು, ಜಯಪ್ರಕಾಶ್ ಹೆಗ್ಡೆಯವರು, ಶ್ರೀ ರಾಮರೆಡ್ಡಿಯವರು, ರೋಷನ್ ಬೇಗ್‌ರವರ KIADB ಯಲ್ಲಿ ಆಗುತ್ತಿರುವ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ BMIC project ನಲ್ಲಿ ಏನು NOC ಗಳನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಸರ್ಕಾರದ ನಿಲುವೇನು? ಎನ್ನುವುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. "Banglore-Mysore Infrastructure corridor ಯೋಜನೆ 2ನೇ ಹಂತ ಹಾಗೂ 3ನೇ ಹಂತ ಭೂಸ್ವಾಧೀನದಲ್ಲಿರುವ ರೈತರುಗಳಿಗೆ ಆಕ್ಷೇಪಣಾ ರಹಿತ ಪತ್ರ ನೀಡುವ ಬಗ್ಗೆ". ಪತ್ರದ ಸಂಖ್ಯೆ : BMIC Cl 82 CR 24-3-2004 ದಿನಾಂಕ : 6–5–2003. 2003ರಲ್ಲಿ ಒಂದು ಪತ್ರವನ್ನು ಕಾನೂನು ಇಲಾಖೆಗೆ ಮತ್ತು Advocate General ರವರಿಗೆ ಕಳುಹಿಸಿದಕ್ಕೆ, Law Department ನಿಂದ ಈ ರೀತಿಯ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. "The only possible no objection endorsement could be, in effect that the transferor or the transferee are both aware of the consequence of the acquisition being complete and the transferee being only entitled to what the transferor or holder would have received as compensation for the acquisition without reference to the value of the improvements made to the land". ಅಂದರೆ Deputy Secretary, Law Department ನಿಂದ ಒಂದು ಅಭಿಪ್ರಾಯವನ್ನು ಹೇಳುವುದೇನೆಂದರೆ, ನೀವು ಹಲವಾರು ವರ್ಷಗಳಿಂದ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ರೈತರಿಗೆ compensation ಸಿಗಲಿಲ್ಲ ಅಭಿವೃದ್ಧಿಪಡಿಸಿಕೊಳ್ಳಲಿಕ್ಕೂ ಆಗಲಿಲ್ಲ, ಹಾಗಾಗಿ ರೈತರಿಗೆ ತೊಂದರೆಯಾಗಿದೆ ಎಂದು ಅರ್ಜಿಯನ್ನು ಕೊಡುತ್ತಾರೆ. ಅದರ ಮೇಲೆ 2003ರಲ್ಲಿ ಕಾನೂನು ವಿಭಾಗದ ಒಂದು ಅಭಿಪ್ರಾಯವನ್ನು ಪಡೆಯುತ್ತಾರೆ. ಆ ಅಭಿಪ್ರಾಯದಲ್ಲಿ ಅವರು ಇದನ್ನು ಕೊಡಬಹುದು, ಇದನ್ನು ಕೊಡುವಾಗ ಆ ಒಂದು compensation amount ಇದೆಯಲ್ಲ, ಅದನ್ನು ಇವತ್ತಿನ ಯಾರದು transfer ಆಗುತ್ತದೆ ಅವರು ತೆಗೆದುಕೊಳ್ಳಬೇಕೆನ್ನುವ ಅಭಿಪ್ರಾಯವನ್ನು ಇವರು ವ್ಯಕ್ತಪಡಿಸುತ್ತಾರೆ. ಆದಾದ ಮೇಲೆ, Advocate

General ರವರ ಅಭಿಪ್ರಾಯವನ್ನು ಕೂಡ ಕೇಳುತ್ತಾರೆ. ಅವರೇನು ಹೇಳುತ್ತಾರೆಂದರೆ, in law there is no specific bar to alienation by the land owners after issue of primary notification. Advocate General ರವರು ದಿ:05.06.2004 ರಲ್ಲಿ, ಈ ತರಹ ತೊಂದರೆಗಳಿರುವಾಗ NOC ಗಳನ್ನು ಕೊಡಬಹುದೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ರೋಷನ್ ಬೇಗ್‌ರವರೆ, ನಡೆದಿದ್ದನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ನಡೆದಿದ್ದು ಹೇಳುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇವತ್ತು ಹೊಸದಾಗಿ NOC ಗಳನ್ನು ನಮ್ಮ ಗಮನಕ್ಕೆ ಬಂದು, ಸರ್ಕಾರಕ್ಕೆ ಬಂದು ಕೊಟ್ಟಿದ್ದಲ್ಲ. ಇವತ್ತು ನಾವು ಹೊಸದಾಗಿ ಪ್ರಾರಂಭ ಮಾಡಿ NOC ಗಳನ್ನು ಕೊಟ್ಟಿದ್ದಲ್ಲ ಜಯಪ್ರಕಾಶ್ ಹೆಗ್ಡೆಯವರು ಹೇಳಿದರು. ಅಂದಿನ ಕಾರ್ಯದರ್ಶಿಗಳೆಲ್ಲ ಕೂಡ ತೀರ್ಮಾನ ತೆಗೆದುಕೊಂಡಿದ್ದಾರೆ, ಸರ್ಕಾರದ ಮಟ್ಟದಲ್ಲಿ ತೀರ್ಮಾನವನ್ನು ತೆಗೆದುಕೊಡು NOC ಹಾಗೂ ಕ್ರಯಪತ್ರಗಳನ್ನು ಕೂಡ ಮಾಡಿದ್ದಾರೆ. ಇಲ್ಲವೆಂದು ಹೇಳಿ. NOC ಗಳನ್ನು ಕೊಟ್ಟಿದ್ದಾರೆ. 2003ರಿಂದ 2007ರವರೆಗೆ ಈ NOC ಗಳನ್ನು ಕೊಡಬಹುದೆನ್ನುವ ವಿಚಾರವನ್ನು Law Department ಮತ್ತು ನಮ್ಮ Advocate General ರವರ ಅಭಿಪ್ರಾಯದ ಮೇರೆಗೆ ಇವತ್ತು NOC ಗಳನು ರೈತರಿಗೆ ತೊಂದರೆಯಾಗಬಾರದೆನ್ನುವ ಉದ್ದೇಶದಿಂದ ಕೊಟ್ಟಿದ್ದೇವೆಂದು ಹೇಳಿ ಇವತ್ತು ನಮ್ಮ ಮುಂದಿರುವ ಸಾಕ್ಷ್ಯಾದಾರಗಳು. NOC ಗಳಿಗೆ ಸಂಬಂದಪಟ್ಟ ಹಾಗೆ, ತಾವು ಹೇಳಿದಿರಿ. ಹೌದು. ಮೈಸೂರು, ಮದ್ದೂರು, ರಾಮನಗರದಲ್ಲಿ ಬೆಲೆ ಬಾಳುವ ಜಾಗಗಳು, ಎಲ್ಲದಕ್ಕೂ ಕೂಡ ಈ NOC ಗಳನ್ನು ಕೊಟ್ಟಿರುವಂಥಾದ್ದು ಇದರಲ್ಲೇನೊ ಹೊಸದಾಗಿ ಮಾಡಿದಂಥದ್ದಲ್ಲ. ಹಿಂದಿನ ಸರ್ಕಾರಗಳ ನಿರ್ಧಾರದಂತೆ ಇದು ಆಗಿರುವುದು. ಎರಡನೆಯದಾಗಿ, ಇನ್ನು, ಕ್ರಯಪತ್ರಗಳ ಬಗ್ಗೆ ಹೇಳಿದ್ದಾರೆ. ನಿಜ. ಈಗ ಕ್ರಯಪತ್ರಗಳಿಗೂ ಕೂಡ frame work agreement ನಲ್ಲಿ clear titles ಕೊಡಬೇಕು, outright sale deed ಮಾಡಬೇಕೆನ್ನುವ ವಿಚಾರವನ್ನು ಹಿಂದೆ ಸರ್ಕಾರದಲ್ಲಿ ತೀರ್ಮಾನ ಆದಂತೆ ಇವತ್ತು ಈ ಕ್ರಯಪತ್ರಗಳನ್ನು ಕೂಡ ಮಾಡಿದ್ದಾರೆ. ಆದರೆ, ಯಾವುದಕ್ಕೋಸ್ಕರ ಈ ಅಧಿಕಾರಿ ಮೇಲೆ

ಕ್ರಮವನ್ನು ತೆಗೆದುಕೊಡಿದ್ದೀರೆಂದು ತಾವು ಕೇಳಿದ್ದೀರಿ. ಹೌದು. ಈ ಸರ್ಕಾರ ಬಂದ ಮೇಲೆ ಅನೇಕ ಸಾರಿ ಈ ಸದನದಲ್ಲಿ ನಾವು ಈ ನಂದಿ ಕಾರಿಡಾರ್ ಪ್ರಾಜೆಕ್ಟ್ ಬಗ್ಗೆ ಚರ್ಚೆಯನ್ನು ಮಾಡಿದ್ದೆವು. ಅದಾದಮೇಲೆ, Supreme Court ನಲ್ಲಿ ಹೊಸದಾಗಿ ಒಂದು petition ಅನ್ನು ಹಾಕಿದರು. ಇದನ್ನು ನಮ್ಮ ಗಮನಕ್ಕೆ ತಂದಿಲ್ಲ. ಕ್ರಯಪತ್ರವನ್ನು ಮಾಡುವಾಗಾಗಲಿ ಅಥವಾ NOC ಕೊಡುವಾಗಾಗಲಿ ನಮ್ಮ ಗಮನಕ್ಕೆ ತರದೇ, ಸರ್ಕಾರದ ಗಮನಕ್ಕೆ ತರದೆ ಮಾಡಿದ್ದಾರೆನ್ನುವ ಉದ್ದೇಶದಿಂದ ಅವರನ್ನು, ಅದು punishment ಅಲ್ಲ, Deparmental Enquiry ಅಗಬೇಕು, ಅದಾದ ಮೇಲೆ ಯಾವ ಕಾರಣಕ್ಕಾಗಿ ಅವರು ಈ ರೀತಿ ಕ್ರಯಪತ್ರವನ್ನು ಕೊಟ್ಟಿದ್ದಾರೆನ್ನುವ ಬಗ್ಗೆ ತಿಳಿದುಕೊಂಡ ನಂತರ ಮುಂದಿನ ಕ್ರಮವನ್ನು ಜರುಗಿಸಬೇಕೆನ್ನುವ ಕಾರಣಕ್ಕಾಗಿ ಇವತ್ತು ಅವರನ್ನು ಅಮಾನತಿನಲ್ಲಿಟ್ಟಿದ್ದೇವೆ. ಈ ಒಂದು ಪ್ರಕ್ರಿಯೆ ಇವತ್ತು ಹೊಸದಾಗಿ ಸರ್ಕಾರ ಬಂದು, ನಾವು ಈ ಕ್ರಯಪತ್ರಗಳನ್ನಾಗಲಿ, NOC ಗಳನ್ನಾಗಲಿ ಮಾಡಿದ್ದಲ್ಲ. ಇದನ್ನು ಹಿಂದೆ ನಡೆದುಕೊಂಡು ಬಂದಿದ್ದ ಹಾಗೆ ಅಧಿಕಾರಿಗಳು ಆವತ್ತಿನ ಕಾನೂನಿನಲ್ಲಿ ಸರ್ಕಾರದವರು ಏನು ಆದೇಶ ಕೊಟ್ಟಿದ್ದರು, ಅದಕ್ಕನುಗುಣವಾಗಿ ಮಾಡಿದ್ದಾರೆ. ಇವತ್ತಿನ ಈ Secretary ಯವರಾಗಲಿ ಅಥವಾ CEO ರವರಾಗಲಿ ಇದಕ್ಕೆ ಭಾಗಿಯಲ್ಲ. ಇದರಲ್ಲಿ ನಾನು ಸ್ಪಷ್ಟ ಮಾಡುತ್ತೇನೆ. ಕೆಳಮಟ್ಟದ ಅಧಿಕಾರಿಗಳು ಇದನ್ನು ಮಾಡಿರುವಂಥದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಭಾಗಿಯಲ್ಲದಿದ್ದ ಮೇಲೆ suspend ಮಾಡುವುದಕ್ಕೆ ಯಾರು ಕೇಳಿದ್ದರು? ಪೇಪರ್ ತುಂಬಾ ಬಂದಿದೆ. Principal secretary and CEO ರವರನ್ನು suspend ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ನೀವು ಕೇಳಿದ್ದೀರಂತೆ. ಇಲ್ಲ Asssembly ಯಲ್ಲಿ ನಂತು ಭಾಗಿಗಳಾಗಿಲ್ಲವೆಂದು ಹೇಳುತ್ತೀರಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಯಾರನ್ನೂ suspend ಮಾಡಿ ಎಂದು recommend ಮಾಡಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: Government of Karnataka has sought.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅದು ಸತ್ಯಕ್ಕೆ ದೂರವಾದುದು.

ಅಧ್ಯಕ್ಷರು: ಪೇಪರ್‌ನಲ್ಲಿ ಬಂದಿದ್ದೆಲ್ಲ ಸತ್ಯವಾಗುತ್ತದೆಯೇ ಸ್ವಾಮಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆ Secretary ಯವರನ್ನು suspend ಮಾಡಿ ಎಂದು, CEO ರವರನ್ನು suspend ಮಾಡಿ ಎಂದು ಎಲ್ಲಿಯೂ ನಾವು recommend ಮಾಡಿಲ್ಲ. ಅದು ಸತ್ಯಕ್ಕೆ ದೂರವಾದ ಸಂಗತಿ. ಪತ್ರಿಕೆಗಳಲ್ಲಿ ಬಂದಿರಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಹಿಂದೆ Board resolution ಆಗಿ ಇವತ್ತಿನ Chief Secretary ಆವತ್ತಿನ Principle Secretary ಆಗಿದ್ದು, ಅವರ ಅಧ್ಯಕ್ಷತೆಯಲ್ಲಿ ಹೀಗೆ Sale Deed executive ಮಾಡಬಹುದೆಂದು ತೀರ್ಮಾನ ತೆಗೆದುಕೊಂಡಾಗಿದೆ. 12 ಬಾರಿ ಮಾಡಿದ್ದಾರೆ. ದಿ:20.10.2003 ರಿಂದ 04.07.2007 ರವರೆಗೆ ಮಾಡಿದ್ದಾರೆ.

ಅಧ್ಯಕ್ಷರು: ಹೇಳಿದ್ದೀರಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಹೌದು. ಇವರದ್ದು ಹಿಂದೆ ಆಗಿದ್ದರ ಬಗ್ಗೆ ಏನಿಲ್ಲ. ಮೊನ್ನೆ ಮಾಡಿದ್ದರ ಮೇಲೇಕೆ ಇವರ ಮೇಲೆ ಕ್ರಮ? ಇದು continuous ಆಗಿದೆ. ಒಂದು ಸಲ ಆಗಿದ್ದರೆ. . . .

ಅಧ್ಯಕ್ಷರು: ಅವರು ಏನು ಹೇಳುತ್ತಾರೆ, ಕೇಳೋಣ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಜಯಪ್ರಕಾಶ್ ಹೆಗ್ಡೆಯವರೆ, ಈ ಸರ್ಕಾರ ಬಂದ ಮೇಲೆ 3 ಬಾರಿ Sale Deed ಆಗಿದೆ. ಇದು ನಮ್ಮ ಗಮನಕ್ಕೆ ಬಂದಿಲ್ಲ. 4, 6, 7ನೇ ತಿಂಗಳಲ್ಲಿ ಮಾಡಿದ್ದಾರೆ. ಯಾವ ಕಾರಣಕ್ಕೂ ಅದನ್ನು ನಮ್ಮ ಗಮನಕ್ಕೆ ತರುವುದು ಅಧಿಕಾರಿಗಳ ಕರ್ತವ್ಯ ಕೂಡ ಹೌದು. ಯಾರು ಕ್ರಯಪತ್ರವನ್ನು ನೀಡುತ್ತಾರೆ, ಮೇಲ್ಪಟ್ಟದ ಅಧಿಕಾರಿಗಳ ಮತ್ತು ನಮ್ಮ ಗಮನಕ್ಕೆ ತರುವಂಥದ್ದು ಅವರ ಜವಾಬ್ದಾರಿ ಇತ್ತು. ಆದರೆ, ಅವರು ಗಮನಕ್ಕೆ ತಂದಿಲ್ಲ. ಆ ಕಾರಣಕ್ಕಾಗಿ ನಾವು suspension ಎಂದು ಮಾಡಿದ್ದೇವೆ. It is not a punishment. ಈಗ ಮಾಡಿದ್ದೇವೆ. ಅದನ್ನು enquiry ಮಾಡುತ್ತೇವೆ. ಸತ್ಯಾಸತ್ಯತೆಗಳು ಹೊರಗೆ ಬಂದ ಮೇಲೆ ಸರ್ಕಾರ ತನ್ನ ನಿಲುವನ್ನು ತೆಗೆದುಕೊಳ್ಳುತ್ತದೆ. ಇವತ್ತು ಈ NOC ಗಳ ಬಗ್ಗೆ ತಾವೇನು ಹೇಳಿದಿರಿ, ಇದು ಹಿಂದಿನಿಂದಲೂ ಕೂಡ ನಿರಂತರವಾಗಿ 2003ರಿಂದ ಮಾಡುತ್ತಾ ಬಂದಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : Suspension punishment ಆಗದೆ, ಇವರನ್ನು ಮಾತ್ರ ಏಕೆ ಮಾಡಿದಿರಿ?

ಅಧ್ಯಕ್ಷರು: ನೀವು ಹೇಳಿದ್ದು ಯಾವ ಅರ್ಥ ಕೊಡುತ್ತದೆಂದರೆ, ಹಿಂದೆ ಮಾಡಿಕೊಂಡು ಬಂದಿದ್ದಾರೆ, ನಾವು ಮಾಡಿದ್ದಲ್ಲ ಅಂತ ಅಂದರೆ, ಹಿಂದೆ ತಪ್ಪು ಮಾಡಿದ್ದಾರೆಯೇ? ಸರಿಯಾಗಿ ಮಾಡಿದ್ದಾರೆಯೇ? ಏನಾದರೂ ಹಿಂದೆ ತಪ್ಪು ಮಾಡಿದ್ದರೆ, ಈ ಸರ್ಕಾರಕ್ಕೆ, ನಿಮ್ಮ ಗಮನಕ್ಕೆ ಬಂದಾಗ action ತಗೆದುಕೊಳ್ಳದಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಇರಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: will answer for that.

ಅಧ್ಯಕ್ಷರು: ಹಿಂದೆ ಮಾಡಿದ್ದಾರೆಂದು ಹೇಳಿದರೆ, ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ ಹಾಗಾಗುವುದಿಲ್ಲ. ಅದರ ಬಗ್ಗೆ correct ಆಗಿ ಹೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಉತ್ತರ ಕೊಡುತ್ತೇನೆ. ಈಗ ಈ ರೀತಿ ಏನು ಕ್ರಯಪತ್ರಗಳನ್ನು ಕೊಡುವುದಾಗಲಿ ಅಥವಾ ಕ್ರಯಪತ್ರಗಳನ್ನು ಮಾಡುವುದಾಗಲಿ ಕೂಡಲೇ ನಿಲ್ಲಿಸಬೇಕು, ಇದು ವಿಚಾರಣೆಯಾಗಬೇಕು, ಅಲ್ಲಿಯ ತನಕ ಯಾವೊಂದೂ ಮುಂದಿನ ಪ್ರಕ್ರಿಯೆಯನ್ನು ಮಾಡಬಾರದು ಎಂದು ಹೇಳಿ ಈಗಾಗಲೇ ನಾವು ನಿಲುವನ್ನು ತೆಗೆದುಕೊಡಿದ್ದೇವೆ. ನಮ್ಮ ಗಮನಕ್ಕೆ ಬಂದ ಕೂಡಲೇ ಇವತ್ತೇನು ನಾವು ಸ್ಪಂದಿಸಿದ್ದೇವೆ, ಅದಕ್ಕೆ ಅದು ಉತ್ತರ. ನಾವೇನೂ ಸ್ಪಂದಿಸಲಿಲ್ಲವೆಂದಲ್ಲ. ನಮ್ಮ ಗಮನಕ್ಕೆ ಯಾವಾಗ ಬಂತೋ, ಆವತ್ತೇ ನಾವು ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು: ಹಿಂದೆ ಮಾಡಿದ್ದರಲ್ಲ ಅದರ ಬಗ್ಗೆ are you going to institute enquiry?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಈಗಾಗಲೇ ನಾವು Departmental Enquiry? ಗೆ ಆದೇಶ ಮಾಡಿದ್ದೆವು. ಅದರ ಬಗ್ಗೆ ಪೂರ್ತಿ enquiry ಮಾಡಿ ನಾವು ತಮಗೆ ತಿಳಿಸುತ್ತೇವೆ.

ಶ್ರೀ ಆರ್. ರೋಷನ್ ಬೇಗ್: Departmental Enquiry ಎಂದರೇನು ಸರ್?

ಅಧ್ಯಕ್ಷರು: Enquiry ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಆರ್. ರೋಷನ್ ಬೇಗ್: 2002ರಲ್ಲಿ ಯಾರು Industries Commissioner ಆಗಿದ್ದರು? 2003ರಲ್ಲಿ ಯಾರು Industries Commissioner ಆಗಿದ್ದರು? 2004ರಲ್ಲಿ ಯಾರು Industries Commissioner ಆಗಿದ್ದರು?

ಅಧ್ಯಕ್ಷರು: Departmental Enquiry ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: Industrial infrastructure facilities ನಲ್ಲಿ ಇವರೇನು ಹೇಳಿದ್ದಾರೆ, Transport, Banking, Marketing, Trade, Tourism ಇವೆಲ್ಲಕ್ಕೂ ನಾವು 7(a) ನಲ್ಲಿ ಅವಕಾಶ ಮಾಡಿಕೊಟ್ಟು ನೀವು Industrial Area ದಲ್ಲಿ ಬೇರೆ ಕೆಲಸವನ್ನು ಮಾಡಬಾರದು. ಎಂದು ಹೇಳಿ ಈ facilities ಮಾಡಿಕೊಂಡಾಗ ನಾವು ಹೇಗೆ ಮಾಡುವುದಕ್ಕಾಗುತ್ತದೆ? ಇವತ್ತು ನಾವು provision ಮಾಡಿಕೊಂಡಿರುವುದು. 1997ರಲ್ಲಿ ನಮ್ಮ Act ಅನ್ನು amend ಮಾಡಿ ಇದರಲ್ಲಿ ಈ ರೀತಿ facilities ಅನ್ನು ನಾವೇ ಮಾಡಿಕೊಡಿದ್ದೇವೆ. ಇವತ್ತು ನಮ್ಮ ಆರೋಪವೇನು? ಇವತ್ತು ಕೈಗಾರಿಕಾ ಪ್ರದೇಶಗಳೆಲ್ಲವೂ ಕೂಡ ಬೇರೆ ಕಡೆ ಇದನ್ನು ಮಾಡಿಕೊಂಡಿದ್ದಾರೆ ಹೇಗೆ ಇದು ಎನ್ನುವ ಪ್ರಶ್ನೆ ಇದೆ. ಹೌದು. ನಮ್ಮ Act ನಲ್ಲಿ ಆ ರೀತಿಯ provision ಅನ್ನು ನಾವೇ ಮಾಡಿದ್ದೇವೆ. ಈ Act ಅನ್ನು ನಾವು ಪರ್ಯಾಲೋಚನೆ ಮಾಡಬೇಕಾದ ಅವಶ್ಯಕತೆ ಇದೆ. ಅದೊಂದೇ ಅಲ್ಲ, ತಾವೇನು ಹೇಳುತ್ತಿದ್ದಿರಿ, 1995ರಲ್ಲಿ, 1997ರಲ್ಲಿ, 2000ರಲ್ಲಿ, 2002ರಲ್ಲಿ, 2003ರಲ್ಲಿ, 2004ರಲ್ಲಿ, 2005ರಲ್ಲಿ continuous ಆಗಿ ನಾವು order issue ಮಾಡುತ್ತಾ ಬಂದೆವು. ಆ ಭಾಗವನ್ನು ನಾವು primary notification ಮಾಡಿದೆವು. ಅದಾದ ಮೇಲೆ, ಅದನ್ನು final notification ಮಾಡಲಿಲ್ಲ. ಇವತ್ತು ಆ ಭಾಗದಲ್ಲೇನಾಗಿದೆ? ಇವತ್ತು ಇದನ್ನು ಯಾರು ಬೇಕಾದರು ನೋಡಬಹುದು. ಒಂದು ಜಾಗದಲ್ಲಿ ಮಸೀದಿ ಬಂದಿದೆ. ಒಂದು ಜಾಗದಲ್ಲಿ ಸ್ಮಶಾನ ಬಂದಿದೆ. ಅವರು minorities. ವೀರಸಂದ್ರ ಮತ್ತು ಹೆಬ್ಬಗೋಡಿ ಬಗ್ಗೆ ಈಗ ಮಾತನಾಡುತ್ತಿದ್ದರು.

ವೀರಸಂದ್ರ ಮತ್ತು ಹೆಬ್ಬಗೋಡಿ ಭಾಗದಲ್ಲಿ ಯಾವುದಕ್ಕೋಸ್ಕರ ನೀವು section 4 ಒಳಗೆ, section 4 ಅನ್ನು ತೆಗೆಯಬೇಕಾಗುತ್ತದೆ. ಎಲ್ಲರೂ ಒಪ್ಪಿಗೆ ಕೊಡುವುದಾದರೆ, section 4 ಅನ್ನು ತೆಗೆಯಲಿಕ್ಕೆ ಏನೂ ಅಡ್ಡಿಯಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಸೀದಿ ಎಂದಿರಲ್ಲ, 20 ಎಕರೆ ಇರುತ್ತದೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಎಲ್ಲ details ಹೇಳುತ್ತೇನೆ ಪ್ರತಿಯೊಂದಕ್ಕೂ details ಇದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: No, no, ದಯಮಾಡಿ ಕೇಳಿ. You are the Hon'ble Minister. ನಮ್ಮ ಹತ್ತಿರ documents ಎಲ್ಲ ಇವೆ. ಮಸೀದಿ ಎಂದರೆ, ಅಲ್ಲಿ ಮುಸಲ್ಮಾನರ ಜನಸಂಖ್ಯೆ ಎಷ್ಟಿದೆ? ಇನ್ನು, 10 ವರ್ಷಗಳಲ್ಲಿ ಎಷ್ಟು ಜನಸಂಖ್ಯೆ ಹೆಚ್ಚಾಗಬಹುದು? ಅಷ್ಟೂ ಜನ ಬಂದರೆ, ರಂಜಾನ್ ಹಬ್ಬದ ದಿವಸ ನಮಾಜ್ ಮಾಡುವುದಕ್ಕೆ ಎಷ್ಟು ಜನಕ್ಕೆ ಆಗಬಹುದು? ಅದಕ್ಕೆ ಎಷ್ಟು ಜಾಗ ಬೇಕಾಗಬಹುದು? ಅದು ಈದ್ಗಾವೇ? ಅಥವಾ ಮಾಮೂಲು Masjid? ಈದ್ಗಾ ಆದರೆ, ಆವತ್ತು ಎಲ್ಲರೂ ಹೋಗಿ ಕುಳಿತು ನಮಾಜ್ ಮಾಡುತ್ತಾರೆ. ಅದಕ್ಕೆ ಜಾಗ ಜಾಸ್ತಿ ಬೇಕಾಗುತ್ತದೆ. Burial ground ಎಂದಿರಿ, ಅದು ಯಾವ ಸಮಾಜದ Burial ground? ಎಷ್ಟು ಜಾಗ ಬೇಕು? ನೀವು ಎಷ್ಟು de-notification ಮಾಡಿದ್ದೀರಿ? Please give the details. If the requiremewnt is about half an acre and the de-notification is for 20 acres, then it reflects.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹಿರಿಯರಾದ ಮಾನ್ಯ ರಮೇಶ್‌ಕುಮಾರ್‌ರವರು ಏನು ಕೇಳಿದ್ದಾರೆ, ಅವರು ನಮಾಜು ಮಾಡುತ್ತಿರುವ ಬಗ್ಗೆ ಫೋಟೋಗಳ ಸಮೇತ ಅರ್ಜಿಗಳನ್ನು ತೆಗೆದುಕೊಂಡು ಬಂದು ಕಟ್ಟಡವನ್ನು ತೋರಿಸಿ ಈಗಾಗಲೇ ನಮ್ಮಲ್ಲಿ ಅರ್ಜಿ ಸಲ್ಲಿಸಿದ್ದಾರೆ. ನೋಟಿಫೈಡ್ ಜಾಗದಲ್ಲಿಯೇ ಹೇಳುತ್ತಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ನೋಟಿಫೈ ಮಾಡಬೇಕಾದರೆ ಯಾವ್ಯಾವುದನ್ನು ಮಾಡಬಾರದೆಂದು ನಿಮ್ಮ ಕಾಯ್ದೆಯಲ್ಲಿ ಸ್ಪಷ್ಟವಾಗಿದ್ದರೂ

ಅವುಗಳು ಏಕೆ ನೋಟಿಫೈ ಆದವು? ನೀವು ಹೇಳಬೇಕಲ್ಲವೇ? ಅಲ್ಲಿ ಇಂಡಸ್ಟ್ರಿ ಆಗುವುದಿಲ್ಲವೆಂದು ಗೊತ್ತಿದ್ದು ಏಕೆ ನೋಟಿಫೈ ಆದವು? ನೋಟಿಫಕೇಷನ್ ಹೇಗೆ ಆಯಿತು? 28(1), 3(1),1(3) ಹೇಗೆ ಆಯಿತು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಹೇಳುವುದನ್ನು ನೀವು ಸ್ವಲ್ಪ ಕೇಳಿ ಸರ್. 1997 ರಲ್ಲಿ ಈ ಜಾಗವನ್ನು ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಯಿತು. ನಂತರ ಅಲ್ಲಿ ಆ ದಿವಸ ಏನು ಇತ್ತು, ಏನು ಇಲ್ಲ ಎನ್ನುವುದನ್ನು ನಾನು ಇರುವುದರ ಬಗ್ಗೆ ಹೇಳುತ್ತಿದ್ದೇನೆ. 1997ರಲ್ಲಿ ಭೂ ಸ್ವಾಧೀನ ಪ್ರಾರಂಭವಾಗಿದ್ದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇವರು 1997ರಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಯಿತು ಎಂದು ಹೇಳುತ್ತಾರೆ. ಭೂ ಸ್ವಾಧೀನ ಮಾಡುವುದಕ್ಕಿಂತ ಮೊದಲು ಸಮೀಕ್ಷೆ ಕೆಲಸ ಮಾಡಿರಲಿಲ್ಲವೆ? ಸಮೀಕ್ಷೆ ಕೆಲಸ ಮಾಡಿಸದೇ ಆ ಕೆಲಸ ಮಾಡಿಸುತ್ತಾರೆಯೇ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾದರೆ, ಆ ಜಮೀನು ಏನು ಇದೆ ಅದು ಸರ್ಕಾರದ ವಶದಲ್ಲಿರುತ್ತದೆ. ಅಲ್ಲಿ ಯಾವುದೇ ವಿಧವಾದಂಥ ಕಟ್ಟಡಗಳು ಮತ್ತೊಂದು, ಇನ್ನೊಂದು ಆ ಜಮೀನಿನ ನಕ್ಷೆಯ ರೂಪ ಬದಲಾಗುವುದಕ್ಕೆ ಅವಕಾಶವಿಲ್ಲ. We want to know, ನಿಮ್ಮವರು ನೋಟಿಫಿಕೇಷನ್ ಹೊರಡಿಸುವುದಕ್ಕಿಂತಲೂ ಮೊದಲು ಸಮೀಕ್ಷೆ ಮಾಡಿದರೋ, ಇಲ್ಲವೋ? ಸಮೀಕ್ಷೆ ಮಾಡಿದ್ದರೆ ಇವೆಲ್ಲಾ ಇದ್ದರೆ ಹೇಗೆ ಹೊರಡಿಸಿದರು? ಒಂದು ವೇಳೆ ಸಮೀಕ್ಷೆ ಮಾಡಿದಾಗ ಇವು ಇರಲಿಲ್ಲ, report ಮಾಡಿದ ಮೇಲೆ ಬಂದರೆ how did they allow it? It is an illegal structure.

ಅಧ್ಯಕ್ಷರು: ಆಯಿತು ಬಿಡಿ ಉತ್ತರ ಹೇಳಲಿಕ್ಕೆ ಬಿಡಿ, ಪದೇ ಪದೇ ನೀವು ಎದ್ದು ನಿಂತರೆ ಹೇಗೆ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ತಾವು ಹೇಳಿದಿರಿ. sale deed execute ಮಾಡುವಾಗ ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳಿದರು. ನಾನೊಂದು ಸರ್ಕಾರಿ ಆದೇಶವನ್ನು ತಮ್ಮ ಮೂಲಕ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. "It is pertinent to know that the BMICP is a corridor project taken up on Build, Own, Operate and Transfer (BOOT)

basis, where revenue generation by way of commercial exploitation of land is an accepted philosophy. The Frame work agreement entered into between GOK and NICEL convenants that upon transfer of land, the company will have good, valid, clear and marketable title, free of any encumbrances as provided in Clauses 3.2.4 read with Clauses 5.1.1.1 and 5.1.1.2 of the framework agreement. The agreement entered into between KIADB and NICEL, in its clause 8 clearly spells out that the Board shall execute documents keeping in view the nature of the project and framework agreement entered into between GOK and NICEL. Since the nature of the Project is such that it is a 'BOOT' concept project and the provisions in the framework agreement contemplate holding good. Valid, clear and marketable title, it is clarified to the C&I Department and KIADB that the lands where compensation paid u/s 28(8)of KIADB Act ' Sale Deed' for such land could be executed in favour of the project company". ಪುನಃ ನಿಮ್ಮ ಗಮನಕ್ಕೆ ಏಕೆ ತರಬೇಕು? ಸರ್ಕಾರದಿಂದಲೇ KIADB ಗೆ ಆದೇಶ ಹೋಗಿದೆ. ಆದೇಶ ಕಳುಹಿಸಿದ ಮೇಲೆ ಪುನಃ ಏಕೆ ಸರ್ಕಾರದ ಗಮನಕ್ಕೆ ತರಬೇಕು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅದಾದ ಮೇಲೆ ಮತ್ತೆ ಸುಪ್ರೀಂಕೋರ್ಟಿನಲ್ಲಿ ಪಿಟಿಷನ್ ಆಯಿತು. ಇತ್ತೀಚೆಗೆ ಕೋರ್ಟಿನಲ್ಲಿ ಪಿಟಿಷನ್ ಹಾಕಿದ್ದು ಎಂದು ನಾನು ಹೇಳುತ್ತಿದ್ದೆನಲ್ಲ. ಅದನ್ನು ತಾವು ಗಮನಿಸದಿದ್ದರೆ ಹೇಗೆ? ವೀರಸಂದ್ರ, ಹೆಬ್ಬಗೋಡಿ ಬಗ್ಗೆ ತಾವು ಏನು ಹೇಳಿದಿರಿ, ಇದರಲ್ಲಿ single unit complexsಗೆ ಕೂಡ ಸರ್ಕಾರದಿಂದ ಅನುಮೋದನೆ ಪಡೆದಿರುವಂಥ ಕೆಲವು ಜಮೀನುಗಳು ಒಳಪಟ್ಟಿವೆ. ಕೆಲವು ಜಮೀನುಗಳಲ್ಲಿ ಈಗಾಗಲೇ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿರುವುದು ಇದೆ. ಹಿಂದಿನ ಸರ್ಕಾರದಲ್ಲಿ ಈ ಜಮೀನನ್ನು ಕೈಬಿಡಬೇಕೆಂದು ಶಿಫಾರಸ್ಸು ಮಾಡಿ ಸೆಕ್ಷನ್ 4 ನೋಟಿಫಿಕೇಷನ್ ಆಗದೇ ಇದ್ದದ್ದು, ಅದನ್ನು ನೋಟಿಫಿಕೇಷನ್ ಮಾಡಿರುವುದು ಕೆಲವು ಇವೆ. ಇದರಲ್ಲಿ ಮುಚ್ಚಿಡುವುದು ಏನೂ ಇಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಹಿಂದಿನ ಗೌರ್ನಮೆಂಟೋ, ಈಗಿನ ಗೌರ್ನಮೆಂಟೋ ನಮ್ಮ ಅಪ್ಪ ಇದ್ದ ಗೌರ್ನಮೆಂಟೋ, that is not like that. Notification will have to be done with lot of care, vigilance and responsibility. De- notification has become an act of fate and lot of motives are being interpreted into this particular Act. I am not bothered about who was the Minister and which was the Ministry. I care a damn for all those, ugly action. ನಮಗೆ ಅದು ಬೇಕಾಗಿಲ್ಲ. Were they justified in doing it?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: KIADB Act ನಲ್ಲೂ 28(1) ಆದಮೇಲೆ 28(4) ಹೊರಡಿಸುವ ಮುನ್ನ ಭೂಮಿಯನ್ನು ಸ್ಥಳದಲ್ಲಿ ಪರಿಶೀಲಿಸಿ, ಯಾವ ಕಟ್ಟಡಗಳು ಇವೆ, ಅಲ್ಲಿ ಉಪಯೋಗಕ್ಕೆ ಏನೇನು ಇವೆ ಎನ್ನುವುದನ್ನು 28(4) ಮಾಡುವಾಗ, ನಮ್ಮ ಭೂ ಸ್ವಾಧೀನ ಅಧಿಕಾರಿಗಳು ಸ್ಥಳಕ್ಕೆ ಪರಿಶೀಲನೆ ಮಾಡಿ ಅವರೇ ನಿರ್ಣಯವನ್ನು ಕೈಗೊಂಡು 28(3)ನಲ್ಲಿ ಅವರಿಗೆ ಕೈ ಬಿಡುವುದಕ್ಕೆ ಅಧಿಕಾರವಿದೆ. ನಮ್ಮ Land Acquition officer ಗೆ ಇದೆ. ಸರ್ಕಾರವೇ ಬಿಡುಬೇಕೆನ್ನುವುದಲ್ಲ. 28(4)ರಲ್ಲಿ ತಂದಾಗ ಅದು ಸರ್ಕಾರಕ್ಕೆ ಅಧಿಕಾರ ಇದೆ, ಸೆಕ್ಷನ್ 4 ನಲ್ಲಿ ಈ ಭೂಮಿಯನ್ನು ಕೈ ಬಿಡಬಹುದು ಎನ್ನುವ ಅಧಿಕಾರವಿದೆ. ಅಲ್ಲಿ ಸತ್ಯಾಂಶಗಳನ್ನು ಪರೀಶೀಲನೆ ಮಾಡಿ ನಿರ್ಧಾರಗಳನ್ನು ತೆಗೆದುಕೊಂಡು, ಸರ್ಕಾರ ತೀರ್ಮಾನ ತೆಗೆದುಕೊಳ್ಳುವಂಥದ್ದು ಹಿಂದಿನಿಂದಲೂ ನಡೆದು ಬಂದಿರುವಂಥದ್ದು, ನಾವೇನು ಹೊಸದಾಗಿ ಉಲ್ಲಂಘನೆ ಮಾಡಿ ಮಾಡಿರುವುದು ಯಾವುದೂ ಇಲ್ಲ. ಹೀಗಾಗಿ ಇದನ್ನು ನಾವಾಗಿ ನಾವು ಮಾಡಿರುವುದಿಲ್ಲ, ತಮಗೆ ಬೇಕಾದರೆ ನಾನು ಎಲ್ಲಾ ದಾಖಲೆಗಳನ್ನು ಒದಗಿಸುತ್ತೇನೆ. ಯಾವ್ಯಾವತ್ತು ಏನಾಯಿತು? ಯಾವುದೊಕ್ಕೋಸ್ಕರ ತೆಗೆದುಕೊಂಡಿದ್ದೇವೆ? ತಾವೇನು ಈಗ ಹೇಳಿದಿರಲ್ಲ? ಪ್ರತಿಯೊಂದು ಸೆಕ್ಷನ್ 4ನಲ್ಲಿ ಬಿಟ್ಟಿರುವಂಥ ಜಮೀನುಗಳ ಪೂರ್ತಿ ವಿವರವನ್ನು, ಯಾವ್ಯಾವ ಕಾರಣಕ್ಕೆ ಸುಪ್ರೀಂಕೋರ್ಟಿನಿಂದ ಕೆಲವು ಜಮೀನುಗಳು ಕೈಬಿಡಬೇಕೆಂದು ಆದೇಶ ಬಂದಿರುವುದು ಇವೆ. ಕೆಲವು ಬಿಡಿಎ ನಿಂದ ಹಣವನ್ನು ಕಟ್ಟಿಸಿಕೊಂಡು ಅಲ್ಲಿ ನಕ್ಷೆಯನ್ನು ಮಂಜೂರು ಮಾಡಿಸಿಕೊಂಡು ಅದಕ್ಕೆ

ಎಲ್ಲಾ ಅನುಮತಿಗಳನ್ನು ಪಡೆದಿರುವ ಎಲ್ಲಾ ಜಮೀನುಗಳು ಇದರಲ್ಲಿ ಒಳಪಟ್ಟಿವೆ. ನಾನೇನು ಸುಮ್ಮಸುಮ್ಮನೇ ಹೇಳಲಿಲ್ಲ. ನಮಗೆ ನಾಲ್ಕು ಎಕರೆ ಜಾಗವನ್ನು ಮಸೀದಿಗೆ ಬಿಟ್ಟು ಕೊಡಬೇಕೆಂದು ಕೇಳಿದ್ದಾರೆ. ಒಂದುವರೆ ಎಕರೆ ನಮಗೆ ಸ್ಮಶಾನಕ್ಕೆ ಬಿಟ್ಟುಕೊಡಬೇಕೆಂದು ಕೇಳಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅನ್ಸಾರಿಯವರೇ, ತಾವು, By religion you are a Muslim. Mr.Roshan Being is here. ಮಸೀದಿಗೆ ನಾಲ್ಕು ಎಕರೆ ಬೇಕೆ? ನೀವು ನಮಾಜಿಗೆ ಹೋಗುವವರು ಅಲ್ಲವಾ? ಒಂದು ಮಸೀದಿಗೆ ನಾಲ್ಕು ಎಕರೆ ಬೇಕೆ? ನಾನು 90 ಭಾಗ ಜನ ಮುಸಲ್ಮಾನರು ಇರುವ ಹಳ್ಳಿಯಲ್ಲಿ ಹುಟ್ಟಿ ಬೆಳೆದಿರತಕ್ಕಂಥವನು, ನನ್ನ ಮನೆಯಿಂದ ನಾನು ಎಡವಿ ಬಿದ್ದರೆ ಮಸೀದಿಗೆ ಬೀಳುತ್ತೇನೆ.

ಅಧ್ಯಕ್ಷರು: ಅವರು ಕೇಳಿದ್ದಾರೆಂದು ಕೊಟ್ಟಿದ್ದಾರೆ. ಕೊಟ್ಟರೆ ನಾಲ್ಕು ಎಕರೆನೂ ಕೇಳುತ್ತಾರೆ, 40 ಎಕರೆನೂ ಕೇಳುತ್ತಾರೆ. ಇವತ್ತಿನ ವ್ಯವಸ್ಥೆ ಏನೆಂದರೆ, ಬಿಟ್ಟಿ ಸಿಕ್ಕಿದರೆ ನನಗೂ ಇರಲಿ, ನಮ್ಮಪ್ಪನಿಗೂ ಇರಲಿ ಎನ್ನುವ ಹಳ್ಳಿಯ ಗಾದೆ. ಆ ರೀತಿ ಇರುವಾಗ ಬಿಡುತ್ತಾರೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಅವರು ಕೇಳಿದ್ದನ್ನು ನಾನು ಹೇಳಿದೆ. ಯಾವ್ಯಾವುದಕ್ಕೋಸ್ಕರ ಕೇಳಿದ್ದಾರೆಂದು ಹೇಳಿದೆ. ನಾನು ಕೈ ಬಿಟ್ಟಿದ್ದೇನೆಂದು ಹೇಳಲಿಲ್ಲ. ಹಿಂದೆ ಕೂಡ ಇದಕ್ಕೆ ಅನುಮೋದನೆ ಕೊಟ್ಟು ಬಿಡಬೇಕೆನ್ನುವ ನಿರ್ಧಾರದ ಬಗ್ಗೆ ಹೇಳಿದೆ. ಇವತ್ತು ಮಾನ್ಯ ಸದಸ್ಯರುಗಳು ಯಾವ್ಯಾವ ಜಾಗಗಳ ಬಗ್ಗೆ ತಿಳಿಸಿದ್ದಾರೆ, ಎಲ್ಲದಕ್ಕೂ ಕೂಡ ಸವಿವರವಾದ ಉತ್ತರವನ್ನು ತಮಗೆ ಒದಗಿಸುತ್ತೇನೆ. ಅದರಲ್ಲಿ ಮುಚ್ಚುಮರೆಯಿಲ್ಲ. 28(1) ಮಾಡುವಾಗ ಅನೇಕ ಲೋಪ ದೋಷಗಳಿವೆ. ಯಾವುದಕ್ಕೋಸ್ಕರ ಡಿ-ನೋಟಿಫಿಕೇಷನ್ ಮಾಡುತ್ತೀರಿ ಎಂದರು. ನಿನ್ನೆ ತಾನೇ ಮಾನ್ಯ ಮುಖ್ಯಮಂತ್ರಿಗಳು ಒಂದು ಸುತ್ತೋಲೆಯನ್ನು ಹೊರಡಿಸುತ್ತೇನೆಂದು ಹೇಳಿದರು. ಏನು ಹೇಳಿದರು, ಇದರಲ್ಲಿ ಮಸೀದಿ ಇರಲಿ, ದೇವಸ್ಥಾನ ಇರಲಿ, ಸ್ಮಶಾನ ಇರಲಿ, ಯಾವುದೇ ಶಾಲೆ ಇರಲಿ, ಆಸ್ಪತ್ರೆ ಇರಲಿ, ಕೆರೆ ಇರಲಿ, ಊರು ಪಕ್ಕದಲ್ಲಿ ಜಮೀನು ಇರಲಿ, ಊರನ್ನೇ ಸೇರಿಸಿಕೊಂಡು 28(1) ಮಾಡಿರುವ ನಿದರ್ಶನಗಳು ನಮ್ಮ ಮುಂದೆ ಇವೆ. ಇವುಗಳನ್ನು ಬಿಡದಿದ್ದರೆ

ಅಲ್ಲಿ ಅಧಿಕಾರಿಗಳು ಹೋಗಲಿಕ್ಕೆ ಆಗುವುದಿಲ್ಲ ಮತ್ತು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಪ್ರಾರಂಭದಲ್ಲಿ ಮಾಡಿರುವ ತಪ್ಪಿನಿಂದ ಇದಾಗುತ್ತಿರುವುದು. 28(1) ಅನ್ವಯ ಮಾಡುವಾಗ ಮಾಡಿರುವ ತಪ್ಪಿನಿಂದಾಗಿ ಇವತ್ತು ಡಿ-ನೋಟಿಫಿಕೇಷನ್, ಎಂದೇನು ಹೇಳುತ್ತೀರಲ್ಲ, ಇದು ಹಿಂದಿನಿಂದಲೂ ಕೂಡ ಆಗಿದೆ. ಇವತ್ತೇನು ಹೊಸದಾಗಿ ಈ ಸರ್ಕಾರದಲ್ಲಿ ಬಂದು ನಾವು ಮಾಡಿದೆವು ಎಂದಲ್ಲ. ಈ ಪರಿಪಾಟು ಮಾರ್ಪಾಡು ಆಗಬೇಕಾಗಿದೆ, ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಅವಶ್ಯವಿದೆ. ಇದರಲ್ಲಿ ನಾನು ಹಿಂಜರಿಯುವುದಿಲ್ಲ. ಈಗಾಗಲೇ ನಾನು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಯಾವತ್ತು ಜಮೀನನ್ನು ಭೂ ಸ್ವಾಧೀನ ಮಾಡಿಕೊಂಡರೆ ಎಷ್ಟು ದಿವಸದೊಳಗೆ ಭೂ ಸ್ವಾಧೀನ ಪ್ರಕ್ರಿಯೆ ಮುಗಿಸಬೇಕು, ನಂತರ ಏನು ಕ್ರಮ ಜರುಗಿಸಬೇಕೆಂದು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇನೆ. 1997 ರಲ್ಲಿ, 1995 ರಲ್ಲಿ 2000 ರಲ್ಲಿ ಭೂ ಸ್ವಾಧೀನ ಮಾಡಿಕೊಂಡು ರೈತರೆಲ್ಲ ಕೋರ್ಟುಗಳಿಗೆ ಹೋಗಿ ಅವರೆಲ್ಲ ದುಃಖದಲ್ಲಿದ್ದರೆ ನಮ್ಮ ಪಾಡಿಗೆ ನಾವು ಸುಮ್ಮನಿದ್ದೇವೆ. ಅದಕ್ಕಾಗಿ ಕಟ್ಟುನಟ್ಟಿನ ಕ್ರಮ ಜರುಗಿಸಬೇಕೆಂದು, ಮೂರು ವರ್ಷಗಳ ಅವಧಿಯೊಳಗಾಗಿ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಗಿಸಿ, ನಂತರ ಸರ್ಕಾರ ತೆಗೆದುಕೊಳ್ಳದಿದ್ದರೆ, ಆ ಪ್ರಕ್ರಿಯೆ ಊರ್ಜಿತವಾಗುವುದಿಲ್ಲ, ಅದು ಅನೂರ್ಜಿತವಾಗುತ್ತದೆಂದು ಹೇಳಿ, ಒಂದು ತಿರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಸರ್ಕಾರದ ಮಟ್ಟದಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ನೈಸ್ ಕಂಪನಿಯ ಬಗ್ಗೆ ಹೇಳಿದಿರಿ. ಯಾವುದೇ ಕೆಲಸವನ್ನು ಮುಂದಕ್ಕೆ ಮಾಡುವುದಕ್ಕೆ ಒಂದು ಎನ್‌ಓಸಿ ಕೊಡಬಾರದು, ಸೇಲ್ ಡೀಡ್‌ನ್ನು ಮಾಡಬಾರದು ಎಂದು ಈಗಾಗಲೇ ನಾವು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಹೀಗಾಗಿ ನಾವು ಎಲ್ಲದರಲ್ಲೂ ಹೆಚ್ಚು ಕಡಿಮೆ ಮಾಡಬೇಕೆನ್ನುವ ಉದ್ದೇಶ ನಮ್ಮದೇನೂ ಇಲ್ಲ. ಎಲ್ಲೂ ಇಲ್ಲ.

ಶ್ರೀ ಡಿ.ಕೆ.ಶಿವಕುಮಾರ್ :- ಕೋರ್ಟ್ ಆರ್ಡ್‌ರ್ ಇಂಪ್ಲಿಮೆಂಟೇಶನ್ ಬಗ್ಗೆ ತಾವು ಏನು ಮಾಡುತ್ತೀರಿ? What is your stand?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಸುಪ್ರೀಂ ಕೋರ್ಟ್‌ನಲ್ಲಿ ಈ ಕೇಸು ಇರುವುದರಿಂದ, ಅಲ್ಲಿ ಏನು ತೀರ್ಮಾನವಾಗುತ್ತದೆ ಎಂಬುದರ ಬಗ್ಗೆ

ಗೊತ್ತಿಲ್ಲ. ಆದರೆ, ಅದಕ್ಕಿಂಥ ಮೊದಲು ಏನೇನು ನಡೆದಿದೆ ಎನ್ನತಕ್ಕಂಥದ್ದರ ಬಗ್ಗೆ ತಾತ್ಕಾಲಿಕವಾಗಿ ತಕ್ಷಣವೇ ಅದನ್ನು ಪೂರ್ತಿಯಾಗಿ ನಿಲ್ಲಿಸಿ ಎಂದು ನಾವು ಹೇಳಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ :- ತಾವು earlier owner ನಿಂದ ಬೇರೆಯವರಿಗೆ ಗೈಡೆನ್ಸ್ ವ್ಯಾಲ್ಯು ಮೇಲೆ ಮಾರಿಸಿದ್ದೀರಿ. ಮತ್ತೆ ಆ ಗೈಡೆನ್ಸ್ ವ್ಯಾಲ್ಯು ಪ್ರಕಾರ ರಿಜಿಸ್ಟರ್ ಆಗಬೇಕಾದರೆ ಆತನಗೆ ಏನು ಆದಾಯ ಇತ್ತೆಂಬುದರ ಬಗ್ಗೆ ಮತ್ತು ಆತ ಅಗ್ರಿಕಲ್ಚರಿಸ್ಟ್ ಹೌದಾ ಅಥವಾ ಇಲ್ಲವೋ ಎನ್ನತಕ್ಕಂಥದರ ಬಗ್ಗೆ ನಾವು ಕೇಳಿದ್ದೇವೆ. ಇದಕ್ಕೆ ತಾವು ಉತ್ತರ ಹೇಳಬೇಕು. ಎರಡನೆಯದೇನೆಂದರೆ, ಕೊಂಡುಕೊಂಡವರು ಭೂಸ್ವಾಧೀನವನ್ನು ಮತ್ತೆ ನಿಮ್ಮ ಕಡೆಯಿಂದ ಮಾಡಿಸಿಕೊಂಡು ಅಂದರೆ, 1 ಲಕ್ಷ, 2 ಲಕ್ಷ ರೂಪಾಯಿಗಳಲ್ಲಿ ತೆಗೆದುಕೊಂಡು ಸರ್ಕಾರದ ಕಡೆಯಿಂದ 5 ಲಕ್ಷ ರೂಪಾಯಿಗಳವರೆಗೆ ಹಣ ತೆಗೆದುಕೊಂಡಿದ್ದಾರೆ. ಇದರಲ್ಲಿ ನಮಗೆ ಸಂಬಂಧಪಟ್ಟಂಥವರು ಇದ್ದಾರೆ. ನಿಮಗೆಂದರೆ, ಕಂಪನಿಗೆ ಮತ್ತು ಅಧಿಕಾರಿಗಳಿಗೆ ಸಂಬಂಧಪಟ್ಟವರಿದ್ದಾರೆಂದು ನಾನು ಚಾರ್ಜ್ ಮಾಡಿದ್ದೇನೆ. ಮತ್ತೆ ಅವರ ಹೆಸರುಗಳನ್ನು ಸಹ ಹೇಳಿದ್ದೇನೆ. ನೀವು ಭೂಸ್ವಾಧೀನ ಮಾಡಿದಂತಹ ಸಂದರ್ಭದಲ್ಲಿ ಅವರ ಹತ್ತಿರ ಭೂಮಿ ಇರಲಿಲ್ಲ. ಭೂಸ್ವಾಧೀನ ಮಾಡಿದ ಮೇಲೆ ರೈತರಿಂದ ಜಮೀನು ತೆಗೆದುಕೊಂಡು ಅದನ್ನು ನಿಮಗೆ ವಾಪಸ್ಸು ಕೊಡುವುದಕ್ಕೆ ಅಥವಾ ಕಂಪನಿಗೆ ಕೊಡುವುದಕ್ಕೆ ಹೋಗಿರತಕ್ಕಂಥವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರೆಂದು ನಾನು ಕೇಳಿದ್ದೇನೆ. 1995ರಲ್ಲಿ ನಿಮ್ಮ ನೋಡಲ್ ಆಫೀಸರ್ ಆಗಿದ್ದ ಅವತ್ತಿನ PWDಯ ಪ್ರಧಾನ ಕಾರ್ಯದರ್ಶಿಯವರು ಅಲೈನ್‌ಮೆಂಟ್ ಫಿಕ್ಸ್ ಆಗಿದೆ ಎಂದು ಹೇಳಿದ ಮೇಲೆ ಬೇರೆ ಕಡೆ ಜಾಗವನ್ನು ಏಕೆ ಕೊಟ್ಟಿದ್ದೀರೆಂದು ನಾವು ಕೇಳಿದ್ದೇವೆ. ಇದಕ್ಕೆ ತಾವು ಉತ್ತರ ಹೇಳಿಲಿಲ್ಲ. ಅಲೈನ್ ಮೆಂಟ್ ಆದಮೇಲೂ ಜಾಗವನ್ನು ಕೊಟ್ಟಿದ್ದರೆ, ಪರಿಸರ ನಿಯಂತ್ರಣ ಮಂಡಳಿಯಿಂದ ಇದುವರೆಗೆ ಕ್ಲಿಯರೆನ್ಸ್ ಏಕೆ ತೆಗೆದುಕೊಂಡಿಲ್ಲವೆಂಬುದನ್ನು ಮತ್ತು ಅವರಿಗೇಕೆ ಅಪ್ಲಿಕೇಷನ್ ಕೊಡಿಸಿಲ್ಲವೆಂದು ಕೇಳಿದ್ದೇವೆ. ಇದಕ್ಕೂ ಕೂಡ ತಾವು ಉತ್ತರ ಹೇಳಲಿಲ್ಲ. ನಾನು ತಮಗೆ ಚಾರ್ಜ್ ಮಾಡುತ್ತಿರುವುದೇನೆಂಧರೆ, ಜನಗಳನ್ನು ಉದ್ಧಾರ ಮಾಡುವುದಕ್ಕೋಸ್ಕರ ಡಿ-ನೋಟಿಫಿಕೇಷನ್ ಆಕ್ಟ್ ಇದೆ ಎಂದು

ಹಳ್ಳಿಗಳಿಂದ ಬಂದಿರುವ ನಾವುಗಳು ನಂಬಿಕೊಂಡಿಲ್ಲ. ನಮ್ಮ kitt ತುಂಬಲೆಂದು ಮಾಡಿಕೊಂಡಿದ್ದೀರಿ. ಇದರಲ್ಲಿ ಯಾವುದೇ ರೀತಿಯ ಅನುಮಾನವಿಲ್ಲ. ಆವತ್ತಿನಿಂದ ಇವತ್ತಿನವರೆಗೆ ಮಾಡಿರತಕ್ಕಂಥದ್ದು ಏನೆಂದರೆ, ಜಮೀನನ್ನು ಸ್ವಾಧೀನ ಮಾಡಿಕೊಳ್ಳುತ್ತೇವೆಂದು ಒಬ್ಬ ರೈತನನ್ನು ಅನಾವಶ್ಯಕವಾಗಿ ಭೀತಿಯಲ್ಲಿಟ್ಟಿದ್ದೀರಿ. ಆತ ಬಂದು ಪೇಮೆಂಟ್ ಮಾಡಿದ ತಕ್ಷಣವೇ ನೀವು ಅದನ್ನು ಡಿ– ನೋಟಿಫೈ ಮಾಡುತ್ತೀರಿ. ಇದರ ಬಗ್ಗೆ ತನಿಖೆಯಾಗಬೇಕೆಂದು ಕೇಳುತ್ತಿದ್ದೇನೆ. ನಾನು ಹೇಳಿರತಕ್ಕಂಥದರಲ್ಲಿ ತಪ್ಪಾಗಿದ್ದರೆ ನಾನು ಶಿಕ್ಷೆ ಅನುಭವಿಸುತ್ತೇನೆ. ಅಥವಾ ನೀವುಗಳು ಯಾರಾದರೂ ಪಾಪ ಮಾಡಿದ್ದರೆ ಅನುಭವಿಸುವುದಕ್ಕೆ ತಯಾರಾಗಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಯಾರನ್ನೋ ಉದ್ಧಾರ ಮಾಡುವುದಕ್ಕೋಸ್ಕರ ಡಿ–ನೋಟಿಫಿಕೇಷನ್ ಈ ರಾಜ್ಯದಲ್ಲಿ ಆಗಿದೆ ಎನ್ನತಕ್ಕಂಥದರ ಬಗ್ಗೆ ನಾವು ಭಾವಿಸಿಲ್ಲ. ಎಲ್ಲರನ್ನು ಹಿಂಸೆ ಮಾಡಲಿಕ್ಕೆ 28(1) ಮಾಡಿ ವರ್ಷಗಟ್ಟಲೆ ಬಾಕಿ ಇಡುವುದು, ಆನಂತರ ಪೇಮೆಂಟ್ ಮಾಡಿಸಿಕೊಂಡು ಡಿ–ನೋಟಿಫೈ ಮಾಡುವಂಥ ಕೆಲಸ ಆಗುತ್ತಿದೆ. ಒಂದು ವೇಳೆ ಪೇಮೆಂಟ್ ಮಾಡದಿದ್ದರೆ ಸ್ವಾಧೀನ ಮಾಡುವುದು. ರೋಡ್ ಎಲ್ಲಿ ಹೋಗುತ್ತದೆಂದು ಮತ್ತೆ ಅಲ್ಲಿ ಕೈಗಾರಿಕೆ ಯಾವುದು ಬರುತ್ತದೆಂದು ಹಾಗೂ ಹೋಟೆಲ್ ಯಾವಾಗ ಬರುತ್ತದೆಂದು ಗೊತ್ತಿರುವುದಿಲ್ಲ, ಆದರೂ ನೋಟಿಫಿಕೇಷನ್ ಮಾಡುವುದು. ವ್ಯವಹಾರಕ್ಕೆ ಬಂದರೆ ಡಿ–ನೋಟಿಫೈ ಮಾಡುವುದು, ಬರದಿದ್ದರೆ ನೋಟಿಫಿಕೇಷನ್ ಮಾಡುವುದು. 7, 8, 9 ವರ್ಷ ಯಾವುದಾದರೂ ಜಮೀನುಗಳನ್ನು 28(1) ನೋಟಿಫಿಕೇಷನ್ ಮಾಡಿಬಿಟ್ಟು ಹಾಗೆ ಇಡತಕ್ಕಂಥದ್ದಕ್ಕೆ ಕಾರಣವೇನು? What was the purpose ಎಂದು ಈ ಸಭೆಗೆ ತಾವು ಹೇಳಬೇಕಲ್ಲವೇ? 7, 8 ವರ್ಷ ಇಟ್ಟುಕೊಂಡು ಆನಂತರ ಆತನ ಕೈಯಲ್ಲಿ ಒಂದು ಅರ್ಜಿ ಬರೆಸಿಕೊಂಡು, ಅಂದರೆ, 7, 8 ವರ್ಷ ಆಯಿತು, ನಾನು ಮದುವೆ ಮಾಡಬೇಕು, ನನ್ನ ತಾಯಿಗೆ ಹುಷಾರಿಲ್ಲವೆಂದು ಬರೆಸಿಕೊಂಡು, ಆತನಂಥ ನೀವು ಜಮೀನು ತೆಗೆದುಕೊಂಡು ಹೆಚ್ಚಿನ ಹಣಕ್ಕೆ ಮಾರಾಟ ಮಾಡತಕ್ಕಂಥ ದಂಧೆ ನಡೆದುಕೊಂಡು ಬಂದಿದೆ. ನಾನು ಮಾನ್ಯ ನಾಯ್ಡು ಒಬ್ಬರನ್ನೇ accuse ಮಾಡುತ್ತಿಲ್ಲ. ಇದು ಯಾವತ್ತು ನಿಲ್ಲುತ್ತದೆ? KIADB ವ್ಯಾಪ್ತಿಯನ್ನು ಬೆಂಗಳೂರು ಸಿಟಿಯಿಂದ ಆಚೆಗೆ ಹಾಕಬೇಕೆಂದು ನಾವು ಬೇಡುತ್ತಿದ್ದೇವೆ.

ಇಲ್ಲಿ ಕೈಗಾರಿಕೆಗಳು ಬೇಕಾಗಿಲ್ಲ. ಆದ್ದರಿಂದ, ಸಿಟಿ ಏರಿಯಾದಲ್ಲಿ ಭೂಸ್ವಾಧೀನ ಮಾಡಿಕೊಳ್ಳತಕ್ಕಂಥದ್ದು ಸಾಕು. Industries ಮಾಡಬೇಕೆಂದರೆ, skip out of Bangalore. Bangalore rural district ಆಚೆಗೆ ಈ ವ್ಯಾಪ್ತಿಯನ್ನು ಇಡಿ. ಕೈಗಾರಿಕೆಗಳನ್ನು ಮಾಡಬೇಕೆಂದರೆ ಅವರು ಇಲ್ಲಿಂದ ಆಚೆಗೆ ಮಾಡಲಿ. ಎಲ್ಲವೂ ಕೂಡ ಇವತ್ತಿನ ದಿವಸ KIADB ಹೆಸರಿನಲ್ಲಿಯೇ ಮತ್ತೆ ಎಲ್ಲಾ ಲೂಟಿ ಕೂಡ KIADB ಹೆಸರಿನಲ್ಲಿಯೇ ಆಗುತ್ತಿದೆ. ಯಾವ ರೀತಿಯಾಗಿ ಬೇಕಾಗಿದೆಯೋ ಹಾಗೆ ಇಲ್ಲಿ ಆ್ಯಕ್ಟ್ ಫಿಟ್ ಇನ್ ಆಗಿದೆ. ಎಷ್ಟು ಚೆನ್ನಾಗಿ ಮಾಡಿಕೊಂಡು ಹೋಗಬಹುದು. ಆದರೆ, ಆ ಆಕ್ಟ್ fit in ಆಗಿ ಬಿಟ್ಟಿದೆ. ಅದರ ದುರುಪಯೋಗ ಮಾಡಿಕೊಂಡು ಎಲ್ಲಿಯವರೆಗೆ ಹೋಗುತ್ತೀರೆಂದು ತಾವು ಹೇಳಬೇಕು. ಪ್ರಾಜೆಕ್ಟ್ ರಿಪೋರ್ಟ್‌ಗಳು, ಅಲೈನ್‌ಮೆಂಟ್‌ಗಳು ಇಲ್ಲ ಮತ್ತೆ ಉದ್ದೇಶ ಗೊತ್ತಿಲ್ಲ. ಒಟ್ಟಿನಲ್ಲಿ ಭೂ ಸ್ವಾಧೀನ ಮಾಡಿಕೊಂಡು ಕೊಡುವುದಷ್ಟೆಯಾಗಿದೆ. ಅಥವಾ ಸ್ವಾಧೀನ ಮಾಡುತ್ತೇವೆಂದು ಹೇಳಿ ಆನಂತರ ವಾಪಸ್ಸು ಕೊಡುವುದು. ಈ ರೀತಿಯಾದರೆ ಇದು ಹೇಗೆ ನಡೆಯುತ್ತದೆ? ಏಳೆಂಟು ವರ್ಷಗಳವರೆಗೆ ದುಡ್ಡು ಕೊಡದಿದ್ದರೆ ಅರ್ಥ ಏನು? ನಾನು ನಿಮ್ಮನ್ನು ಕೇಳುವುದೇನೆಂದರೆ, KIADB ಯಲ್ಲಿ 10–12 ವರ್ಷದಿಂದ ನಡೆದಿರುವ ವ್ಯವಹಾರದ ಬಗ್ಗೆ ಸ್ಟಾಂಪ್ ಕದ್ದಿರುವ ದಿನದಿಂದ ಬ್ಲ್ಯಾಕ್ ಮನೆ ಕೊಟ್ಟಿರುವವರೆಗೆ ಹಾಗೂ NOC ತೆಗೆದುಕೊಳ್ಳುವುದಕ್ಕೆ ಹಣ ಕೊಟ್ಟಿರತಕ್ಕಂಥದ್ದರ ಬಗ್ಗೆ ಒಂದು ತನಿಖೆಗೆ ತಾವು ಆದೇಶ ಮಾಡಬೇಕು. ಇದರ ಬಗ್ಗೆ ತನಿಖೆಯಾಗಲಿ, ಇದರಲ್ಲಿ ಯಾರು ತಪ್ಪಿತಸ್ಥರೆಂದು ಗೊತ್ತಾಗಲಿ.

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ಅವರು ಮಾಡಿರುವ ವಾದಕ್ಕೆ ಇದೆಲ್ಲಾ ಹಿಂದೆ ಆಗಿರುವುದೆಂದು ತಾವು ಹೇಳುತ್ತಿದ್ದೀರಿ. ಮತ್ತೆ ಇದು ನಮ್ಮ ಕಾಲದಲ್ಲಿ ಆಗಿಲ್ಲವೆಂದು ತಾವು ಹೇಳಿದ್ದೀರಿ. ದಯಮಾಡಿ ನಾನು ಹೇಳುವುದನ್ನು ಕೇಳಿ. ಈಗ ನೀವು ಡಿ–ನೋಟಿಫೈ ಮಾಡುತ್ತೀರಿ, ಡಿ–ನೋಟಿಫೈ ಮಾಡುವಾಗ ಬಹಳ ಬಿಗಿಯಾದ ಕ್ರಮಗಳು ಇರಬೇಕು. ತೀರ ಅಗತ್ಯವಾಗಿ ಡಿ–ನೋಟಿಫೈ ಆಗಲೇಬೇಕೆಂದಾಗ ಮಾತ್ರ ಮಾಡಿ. ಇಲ್ಲದಿದ್ದರೆ ಅವರು ಹೇಳಿದ ಹಾಗೆ ನಮ್ಮ ಸಚಿವಾಲಯದಲ್ಲಿ ಅಬ್ಜಕ್ಷನ್ ಇಟ್ಟಿರುತ್ತಾರೆ, ಅವರು ಬಂದು ಕೊಟ್ಟ ಕೂಡಲೇ ಎಲ್ಲಾ ಪೇಪರ್‌ಗಳು ಮುಂದಕ್ಕೆ

ಹೋಗುತ್ತದೆ. ಇಲ್ಲದಿದ್ದರೆ ಅಲ್ಲಿಯೇ ಉಳಿದುಕೊಳ್ಳುತ್ತದೆ. ಈ ರೀತಿಯಲ್ಲಿ KIADBಯಲ್ಲಿ ಮಾಡಿದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ನಾನು ಎರಡು–ಮೂರು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. KIADB Act ಪ್ರಕಾರ........

ಅಧ್ಯಕ್ಷರು:– ನೀವೇಕೆ ಮಾತನಾಡುತ್ತೀರಿ? ಹಿಂದೆ ನೀವು ಮಂತ್ರಿಗಳಾಗಿದ್ದವರು, ಅವರು ನಿಮ್ಮ ಕತೆಯನ್ನೇ ಹೇಳುತ್ತಿದ್ದಾರೆ. ನಿಮ್ಮ ಹಳೆಯ ಕತೆಯನ್ನೇ ಏನು ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅವರು ಹೇಳತಕ್ಕಂಥದರಲ್ಲಿ ಏನಾದರು ನಿಜ ಇದ್ದರೆ ಅದು, you are all partners in that crime.

ಶ್ರೀ ಆರ್.ವಿ.ದೇಶಪಾಂಡೆ:– ನಿಜ ಇರತಕ್ಕಂಥದ್ದನ್ನು ನಾನು ಹೇಳಬೇಕಲ್ಲವೇ?

ಅಧ್ಯಕ್ಷರು:– ನಿಮ್ಮ ನಿಜ ಏನಿದೆ ಎಂಬುದನ್ನು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, KIADB Act ಪ್ರಕಾರ ಹಲವಾರು ಕಡೆ ಲ್ಯಾಂಡ್ ಸ್ವಾಧೀನ ಮಾಡಿಕೊಳ್ಳುತ್ತಾರೆ. ಸರ್ಕಾರದ ಹೆಸರಿನಲ್ಲಿ ಸ್ವಾಧೀನ ನಡೆಯುತ್ತದೆ. 28(1) ಮತ್ತು 28(4) ಪ್ರಕಾರ ಅಪ್ರೂವಲ್ ಮಾಡುವುದಕ್ಕೆ ಆ ಫೈಲ್ ನಮಗೆ ಬರುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, KIADB ಲ್ಯಾಂಡ್ ಅಲಾಟ್ ಮಾಡುವುದು ಮತ್ತು KIADB ಲ್ಯಾಂಡ್ ಲೀಸ್ ಕೊಡುವುದು, ಸೇಲ್ ಡೀಡ್ ಮಾಡುವಂಥದರ ಒಂದು ಕಡತವಾದರೂ ನನ್ನ 10 ವರ್ಷಗಳ ಅವಧಿಯಲ್ಲಿ ನನ್ನ ಕಡೆ ಬಂದಿಲ್ಲ. ಲೀಸ್ ಕೊಟ್ಟಿದ್ದೇವೆ ಅಪ್ರೂವಲ್ ಮಾಡಿ ಎಂದು ನಮಗೆ ಯಾವುದಾದರೊಂದು ಕಡತ ಬಂದಿದೆಯೇ? ಈ ಪ್ರಶ್ನೆಗೆ ನನಗೆ ಉತ್ತರ ಬೇಕು? ಎರಡನೇ ಪ್ರಶ್ನೆ ಏನೆಂದರೆ, ನಮ್ಮ Land Acquisition Actನ Section (6) ಪ್ರಕಾರ ಒಂದು ನೋಟಿಫಿಕೇಷನ್ ಆದ ನಂತರ ಅದು ಒಂದು ವರ್ಷದಲ್ಲಿ ಫೈನಲ್ ಆಗದಿದ್ದರೆ ಅದು ವಿಷಿಯೇಟ್ ಆಗುತ್ತದೆ. ಆದರೆ, KIADB Act ನಲ್ಲಿ 28(1) ಮಾಡಿದ ನಂತರ ಮಾನ್ಯ ಮಾಧುಸ್ವಾಮಿಯವರು

ಹೇಳಿದ ಹಾಗೆ 8–10 ವರ್ಷಗಳಾದರೂ ವಿಷಿಯೇಟ್ ಆಗುವುದಿಲ್ಲ. ನಾನು ಒಂದು ಕಡತದಲ್ಲಿ ಆದೇಶ ಮಾಡಿದೆ. ಅದೇನೆಂದರೆ, ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ, ಕನಿಷ್ಟ ಎರಡು–ಮೂರು ವರ್ಷಗಳ ಅವಧಿ ಇಟ್ಟುಕೊಳ್ಳಬೇಕು. ಈ ಅವಧಿಯಲ್ಲಿ ಮಾಡದಿದ್ದರೆ, ನೀವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆದೇಶ ಮಾಡಿದ್ದೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ? ಮೂರನೇ ಪ್ರಶ್ನೆ ಏನೆಂದರೆ, ಇಲ್ಲಿ ಪ್ರಸ್ತಾಪವಾಗಿದೆ, Sale deed ಮಾಡಬಾರದೆಂದು KIADB ಗೆ ಆದೇಶ ಮಾಡಿದ್ದೇವೆಂದು ತಾವು ಈಗ ತಾನೇ ಒಂದು ಮಾತನ್ನು ಹೇಳಿದ್ದಿರಿ. ಈ ರೀತಿಯಾದ ಆದೇಶ ಮಾಡಿದ್ದರೆ ಅದನ್ನು ಲಿಖಿತವಾಗಿ ಮಾಡಬೇಕಾಗುತ್ತದೆ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ, ಈಗ ಚೀಫ್ ಸೆಕ್ರೆಟರಿಯಾಗಿರುವವರು ಹಿಂದೆ Additional Chief Secretary ಆಗಿದ್ದಾಗ October-November 2006 ರಲ್ಲಿ ಅವರು ಸಭೆ ಮಾಡಿ Sale deed execute ಮಾಡುವುದಕ್ಕೆ ಹೇಳಿದ್ದಾರೆ. ಇದಕ್ಕೆ ತಾವೇನು ಹೇಳುತ್ತೀರಿ? ಆ ನಂತರ ಮಾಡಬಾರದೆಂದು ತಮ್ಮ ಆದೇಶ ಏನಾದರೂ ಬರವಣಿಗೆಯಲ್ಲಿ ಹೋಗಿದೆಯೇ? ನಾಲ್ಕನೇ ಪ್ರಶ್ನೆ ಏನೆಂದರೆ, ನೈಸ್ ಕಂಪನಿಯವರು, ನಮ್ಮ ಸ್ನೇಹಿತರು ಹೇಳಿದ ಹಾಗೆ 28(1) ಮಾಡಿದ ನಂತರ ಅದನ್ನು ಮಾರಾಟ ಮಾಡುವುದಕ್ಕೆ ಅನುಮತಿಯನ್ನು ಕೊಡುವುದು ಮತ್ತೆ ಯಾರು ಅದನ್ನು ತೆಗೆದುಕೊಳ್ಳುತ್ತಾನೆ ಆತನಿಗೆ ಲ್ಯಾಂಡ್ ಸ್ವಾಧೀನ ಮಾಡಿಕೊಡುವುದರ ಬಗ್ಗೆ KIADB ಗೆ ಆಗಸ್ಟ್ 21, 2006ರಲ್ಲಿ ಈ ಪ್ರಕಾರ ಮಾಡಬಾರದು, ಇದರಿಂದ ನಮಗೆ ಹಾನಿಯಾಗುತ್ತದೆ ಎಂದು ಒಂದು ಪತ್ರವನ್ನು KIADB ಗೆ ಬರೆದಿದ್ದಾರೆಯೇ ಅಥವಾ ಇಲ್ಲವೇ? 21.8.2006ರಲ್ಲಿ Special Deputy Commissionerಗೆ ಒಂದು ಪತ್ರ ಹೋಗಿದೆ. 28(1) ಪ್ರಕಾರ ಸೇಲ್ ಮಾಡಬೇಡಿ, ಸೇಲ್ ಮಾಡಿದರೆ ನಮಗೆ ಹಾನಿಯಾಗುತ್ತದೆಂದು ಹಾಗೂ ನಮ್ಮ ಅಲೈನ್‌ಮೆಂಟ್‌ಗೆ ತೊಂದರೆಯಾಗುತ್ತದೆಂದು ಪತ್ರ ಬರೆದಿದ್ದಾರೆ ಅದು ನಿಜವೇ?

ಶ್ರೀ ಜೆ. ಸಿ. ಮಾಧುಸ್ವಾಮಿ:– ಆ ಪ್ರಾಪರ್ಟಿಯನ್ನು ಕೊಂಡು ಕೊಂಡಿರುವವರು ನೈಸ್ ಕಂಪನಿಯ ನೌಕರರೆಂದು ನಾನು ಪ್ರೂವ್ ಮಾಡುತ್ತೇನೆ. ಪತ್ರ ಬರೆದಿದ್ದಾರೆ, I will read out. ತಾವು ನನಗೆ ಆಗಲೇ ಸಮಯ ಕೊಡಲಿಲ್ಲ, ಅದನ್ನು ಓದುತ್ತೇನೆ.

ಅಧ್ಯಕ್ಷರು:- ಅದೆಲ್ಲಾ ಒಂದು ಕಳ್ಳರ ಗ್ಯಾಂಗ್ ಏಕೆ ಒತ್ತಾಯ ಮಾಡುತ್ತೀರಿ ಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅದಕ್ಕೆ ಸಂಬಂಧಪಟ್ಟಂಥ ರೆಕಾರ್ಡ್ ಕೊಡುತ್ತೇವೆ. ಆ ಪ್ರಾಪರ್ಟಿಯನ್ನು ಕೊಂಡು ಕೊಂಡಿರುವವರು ನೈಸ್ ಕಂಪನಿಯ ನೌಕರರು.

ಅಧ್ಯಕ್ಷರು:- ಕಳ್ಳಕಳ್ಳರು ಸೇರಿಕೊಂಡು ಸಂತೆಗೆ ಹೋದರಂತೆ. ಆ ರೀತಿಯಲ್ಲಿ ಇಲ್ಲಿ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಆ ಪ್ರಾಪರ್ಟಿಯನ್ನು ಕೊಂಡು ಕೊಂಡಿರುವವರು ಯಾರೆಂದರೆ, ಪುಷ್ಪಲತಾ ಕೆ.ಆರ್.ರಮೇಶ್ ಮಗ, ಹೆಂಡತಿ, ಇವರೆಲ್ಲರೂ ಯಾರು? How can he write such a letter? ಮಂಜುನಾಥ್, ಮಂಜುಳ ಇವರೆಲ್ಲಾ ಆ ಕಂಪನಿಯಲ್ಲಿ ಕೆಲಸ ಮಾಡತಕ್ಕಂಥವರಾಗಿದ್ದಾರೆ.

ಅಧ್ಯಕ್ಷರು:- ಮಾನ್ಯ ಕೈಗಾರಿಕಾ ಮಂತ್ರಿಗಳೆ, have consultation with the Chief Minister, either House Committee or Judicial enquiry, some kind of top enquiry ಗೆ ಒಪ್ಪಿಕೊಳ್ಳಿ. ಏಕೆಂದರೆ, KIADB ಯಲ್ಲಿ ಬಹಳ ದಿವಸದಿಂದ ಈ ರೀತಿಯಾದ ಅವ್ಯವಹಾರಗಳು ನಡೆದಿವೆ. ನಿಮ್ಮ ಕಾಲದಲ್ಲಿ ಅಂತ ಅಲ್ಲ. ಎಲ್ಲಾ ಕಾಲದಿಂದಲೂ ನಡೆದುಕೊಂಡು ಬಂದಿದೆ. ಆದ್ದರಿಂದ, ಕಣ್ಣು ಮುಚ್ಚಿಕೊಂಡಿರುವುದರಿಂದ ಅದೇ ದಾರಿಯಲ್ಲಿ ಈಗಲೂ ಸಹ ನಡೆದುಕೊಂಡು ಬಂದಿದೆ. ನಮ್ಮ ಊರಿನಲ್ಲಿ ಎದ್ದೇಟಿನಲ್ಲಿ ಏರೂಡಿಕೊಂಡು ಹೋಗುತ್ತಾರೆ, ಆ ರೀತಿಯಲ್ಲಿ ಮಾಡಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಒಂದು ಸಾರಿ ಕ್ಲೀನ್ ಆಗಲಿ, ಏನೇನು ತಪ್ಪಾಗಿದೆ, ಏನೇನು ಅಮೆಂಡ್‌ಮೆಂಟ್ಸ್ ಬೇಕೆಂದು ಮತ್ತು ಯಾವ ರೀತಿಯಲ್ಲಿ ಸರಿಪಡಿಸಬೇಕೆಂಬುದರ ಬಗ್ಗೆ ಒಂದು ತನಿಖೆ ಮಾಡಿಸಿ.

ಶ್ರೀ ಡಿ.ಕೆ. ಶಿವಕುಮಾರ್:- ಈಗಾಗಲೇ ತನಿಖೆ ನಡೆಯುತ್ತಿದೆ. Enquiry is already going on. Let this also go there. ಈಗಾಗಲೇ ಒಂದು ಕಮಿಟಿಯನ್ನು ಮಾಡಿದ್ದಾರಲ್ಲವೇ?

ಅಧ್ಯಕ್ಷರು:– ಎಲ್ಲಿ ಆಗಿದೆ?

ಶ್ರೀ ಆರ್.ವಿ. ದೇಶಪಾಂಡೆ:– ಈಗಾಗಲೇ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು:– ಬಿಐಎಂಸಿ ಬಗ್ಗೆ ಹೇಳುತ್ತಿಲ್ಲ. ಅವರು entire KIADB ಬಗ್ಗೆ ತನಿಖೆ ಆಗಲೆಂದು ಹೇಳುತ್ತಿದ್ದಾರೆ. ಅಲ್ಲಿ ಹೇಗೆ ನೋಟಿಫಿಕೇಷನ್ ಆಗುತ್ತದೆಂದು ಮತ್ತು ಹೇಗೆ ಡಿ–ನೋಟಿಫಿಕೇಷನ್ ಆಗುತ್ತದೆ ಎಂಬುದರ ಬಗ್ಗೆ ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :–ಕೇವಲ KIADB ಯಲ್ಲಿ ಮಾತ್ರ ಇದು ಆಗುವುದಿಲ್ಲ. Land Acquisition Act ನಲ್ಲಿ ಕೂಡ ಮಾಡಲಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಸ್ವಲ್ಪ ಕೇಳಿ ಸ್ವಾಮಿ. BMIC ರವರು ಒಂದು ಅಥವಾ ಎರಡು ಇರಬಹುದು ಮೈಸೂರು ಹತ್ತಿರ ಕ್ರಿಮಿನಲ್ ರೆಕಾರ್ಡ್ಸ್ ಇರತಕ್ಕಂಥ ಹೌಸಿಂಗ್ ಸೊಸೈಟಿಗೆ ಕೊಟ್ಟಿದ್ದಾರೆ ಅಂತ ಇದೆ. ಆದ್ದರಿಂದ, entire KIADB ವ್ಯವಹಾರದ ಬಗ್ಗೆ ಏನಾದರೊಂದು ಮಾಡಿ ಸ್ವಲ್ಪ ಬದಲಾವಣೆಯಾಗಲಿ.

ಶ್ರೀ ಆರ್.ವಿ. ದೇಶಪಾಂಡೆ: BDA ಆಗುತ್ತದೆ, KIADB ಆಗುತ್ತದೆ, ಸರ್ಕಾರದ್ದು ಆಗುತ್ತದೆ, Urban Development Department ಆಗುತ್ತದೆ, ಎಲ್ಲವನ್ನು enquire ಮಾಡಿ, ಏನು ತಪ್ಪು ಇದೆ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಇಂಥದ್ದು ಎಲ್ಲಾ ಇರುವಾಗ ಸಣ್ಣ ಅಧಿಕಾರಿಯನ್ನು ಏಕೆ suspend ಮಾಡಿದರು ಎನ್ನುವುದು ಕೂಡ ಇದೆ. ಏಕೆಂದರೆ, ಇವರದ್ದು cover up ಮಾಡಿಕೊಳ್ಳುವುದಕ್ಕೆ ಅಂತ.

ಅಧ್ಯಕ್ಷರು: ಈ ಸರ್ಕಾರ ಮಾಡಿದೆ, ಆ ಸರ್ಕಾರ ಮಾಡಿದೆ ಎಂದು ಹೇಳುವುದಕ್ಕಿಂತ ಇದಕ್ಕೆ ಎಲ್ಲಾದರೂ ಒಂದು ಕಡೆ Full stop ಹಾಕಬೇಕು.

ಇದಕ್ಕೆ ಏನಾದರೊಂದು ಬದಲಾವಣೆಯನ್ನು ತರಬೇಕು. ಇದನ್ನು ಹೇಳಿಕೊಂಡು ಹೋಗುವುದರಿಂದ ಯಾರಿಗೂ ಗೌರವವಲ್ಲ. ಅದಕ್ಕೆ ನೀವು ಏನು ಮಾಡುತ್ತೀರಿ ಹೇಳಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: Lease deed ಕೊಡುವಾಗ ಅಥವಾ sale deed ಮಾಡುವಾಗ NOC ಕೊಡುವಾಗ ಬೋರ್ಡಿನಿಂದ ಯಾವತ್ತೂ ಅದು ಸರ್ಕಾರಕ್ಕೆ ಬರುವುದಿಲ್ಲ. ಅದು ಅಧಿಕಾರಿಗಳ ಮಟ್ಟದಲ್ಲೇ ಎಲ್ಲವೂ ಕೂಡ ಆಗುತ್ತವೆ. ಆದರೆ ಇದೊಂದು special case ನಲ್ಲಿ ಏನಾಗಿದೆ ಎಂದರೆ, Supreme Court ನಲ್ಲಿ ಒಂದು ಕೇಸ್ ಹಾಕಿರುವುದರಿಂದ ಸರ್ಕಾರದಲ್ಲಿ ಇದಕ್ಕೆ ಬೇರೆ ರೀತಿಯ ಅಭಿಪ್ರಾಯಗಳು ಇರುವ ಕಾರಣಕ್ಕಾಗಿ ನಾವು ಇವತ್ತು ತಮ್ಮ ಗಮನಕ್ಕೆ ತಂದಿಲ್ಲ.

ಶ್ರೀ ಆರ್. ರೋಷನ್ ಬೇಗ್: ಬೋರ್ಡಿನಲ್ಲಿ ಏನು subject ಬರುತ್ತದೆಂದು ನಮಗೆ ಗೊತ್ತಿರುವುದಿಲ್ಲವೆ?

ಅಧ್ಯಕ್ಷರು: ಮಂತ್ರಿಗಳಿಗೆ ಎಲ್ಲಿ ಗೊತ್ತಾಗುತ್ತದೆ? ನೀವು ಮಂತ್ರಿಗಳು ಆಗಿದ್ದವರು. ಅವರು ಏನು ದೇವರೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: Land Acquisition ಬಗ್ಗೆ ಏನು Amendment ತರಬೇಕು, ಯಾವ ರೀತಿ KIADB Act ನಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ನಾವು ಒಂದು ಯೋಚನೆಯನ್ನು ಮಾಡಿ ನಮ್ಮ Principal Secretary ಯವರಿಗೆ ಒಂದು ಕಾಗದವನ್ನು ಬರೆದಿರುತ್ತೇವೆ.

> "Under the KIADB Act no limit is prescribed for issuing notification in between 28(1) and 28(4). It is seen that 28(1)was issued long time ago, but no action has been taken to issue 28(4). In some cases even 28(4) was issued only for part of the land and other lands are left alone. Issuing 28(1) and not issuing 28(4) has put farmers to hardship. Therefore, in this regard it has to

be born in mind that in general Land Acquisition Act between 28(1) and 28(4) the gap should be only three years. In the interest of the farmers, it is necessary to bring about suitable changes in the KIADB Act. The Principal Secretary, Commerce and Industries Department is immediately advised to examine this aspect legally and come up with concrete proposals, if necessary, with suitable amendments. Since the amendment is very important and change of policy is involved, the matter may be placed before the Cabinet for approval."

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: - Enquiry ಮಾಡುತ್ತಾರಾ ಅಥವಾ ಇಲ್ಲವೆನ್ನುವುದನ್ನು ಎರಡರಲ್ಲಿ ಒಂದು ಹೇಳಿಬಿಡಲಿ.

ಅಧ್ಯಕ್ಷರು: ಅದು ಹೇಳಿಬಿಡಿ ಸ್ವಾಮಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಒಂದು Enquiry ಯನ್ನು ಇದರ ಬಗ್ಗೆ ನಾವು ಮಾಡಬೇಕೆಂದು ಹೇಳಿ, ನಾವು ಈಗಾಗಲೇ ಸೂಚಿಸಿದ್ದೇವೆ. Departmental enquiry ಮಾಡಬೇಕೆಂದು ಈಗಾಗಲೇ ಹೇಳಿದ್ದೇನೆ. ಅದರ ಸತ್ಯಾಸತ್ಯತೆಗಳು ತಿಳಿದ ಮೇಲೆ ಮುಂದಿನ ಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು. ಆಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3.00 ಗಂಟೆಗೆ ಸೇರುವಂತೆ ನಿಶ್ಚಯಿಸಲಾಯಿತು.)